**Re.No. D. 221**

भारत का राजपत्र
The Gazette of India

# ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

**भाग IX अनुभाग 1**
**PART IX SECTION 1**
**ಭಾಗ IX ವಿಭಾಗ 1**

**प्राधिकार से प्रकाशित**
**Published by Authority**
**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ**

| | | |
|---|---|---|
| सं 1, नई दिल्ली, बुधवार , 07 जून, 2023 | ज्येष्ट 19, 1945 (शक) | खंड.53 |
| No.1, New Delhi, Wednesday, June 07, 2023 | Jyeshtha 19, 1945 (saka) | Vol. 53 |
| ನಂ.1, ನವದೆಹಲಿ, ಬುಧವಾರ, ಜೂನ್ 07, 2023 | ಜ್ಯೇಷ್ಠ 19, 1945 (ಶಕ) | ಸಂಪುಟ.53 |


**Ministry of Law and Justice**
(Legislative Department)
New Delhi, 07th June, 2023

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 07ನೇ ಜೂನ್, 2023**

The Translation in Kannada of the following Acts, namely:- (1) THE EMIGRATION ACT, 1983 (NO.31 OF 1983) (2) THE FOOD SAFETY AND STANDARDS ACT, 2006 (NO.34 OF 2006) (3) THE PAYMENT AND SETTLEMENT SYSTEMS ACT, 2007 (NO.51 OF 2007) (4) THE NATIONAL JUTE BOARD ACT, 2008 (NO.12 OF 2009) (5) THE NATIONAL GREEN TRIBUNAL ACT, 2010 (NO.19 OF 2010) (6) THE RIGHT TO FAIR COMPENSATION AND TRANSPARENCY IN LAND ACQUISITION, REHABILITATION AND RESETTLEMENT ACT, 2013 (NO.30 OF 2013) -are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

# ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010

## (2010ರ ಸಂಖ್ಯೆ 19)

[2ನೇ ಜೂನ್, 2010.]

ಪರಿಸರಕ್ಕೆ ಸಂಬಂಧಿಸಿದಂತೆ ಮತ್ತು ವ್ಯಕ್ತಿಗಳಿಗೆ ಹಾಗೂ ಸ್ವತ್ತಿಗೆ ಉಂಟಾದ ಹಾನಿಗಾಗಿ ಪರಿಹಾರವನ್ನು ಮತ್ತು ನಷ್ಟಪರಿಹಾರವನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಯಾವುದೇ ಕಾನೂನಿನಿಂದ ದತ್ತವಾದ ಹಕ್ಕನ್ನು ಜಾರಿಗೊಳಿಸುವುದೂ ಸೇರಿದಂತೆ ಪರಿಸರ ರಕ್ಷಣೆಗೆ ಮತ್ತು ಅರಣ್ಯಗಳ ಮತ್ತು ಇತರ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗೆ ಸಂಬಂಧಿಸಿದ ಪ್ರಕರಣಗಳನ್ನು ಸಮರ್ಪಕವಾದ ರೀತಿಯಲ್ಲಿ ಮತ್ತು ತ್ವರಿತವಾಗಿ ವಿಲೆ ಮಾಡುವುದಕ್ಕಾಗಿ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವನ್ನು ಸ್ಥಾಪಿಸುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸಲು ಅಧಿನಿಯಮ.

ಮತ್ತು 1972ರ ಜೂನ್‌ನಲ್ಲಿ ಸ್ಟಾಕ್ ಹೋಂನಲ್ಲಿ ಜರುಗಿದ ಮಾನವ ಪರಿಸರ ಕುರಿತ ವಿಶ್ವಸಂಸ್ಥೆಯ ಸಮ್ಮೇಳನದಲ್ಲಿ ಭಾರತವು ಕೂಡ ಭಾಗವಹಿಸಿದ್ದು, ಆ ಸಮ್ಮೇಳನದಲ್ಲಿ ಮಾನವ ಪರಿಸರದ ರಕ್ಷಣೆಗೆ ಮತ್ತು ಸುಧಾರಣೆಗೆ ಸಮರ್ಪಕ ಕ್ರಮಗಳನ್ನು ಕೈಗೊಳ್ಳುವಂತೆ ರಾಷ್ಟ್ರಗಳಿಗೆ ಕರೆ ನೀಡಿ ಕೈಗೊಂಡ ನಿರ್ಣಯಗಳಿಗೆ ಭಾರತವು ಒಂದು ಪಕ್ಷಕಾರ ರಾಷ್ಟ್ರವಾಗಿರುವುದರಿಂದ;

ಮತ್ತು 1992ರ ಜೂನ್‌ನಲ್ಲಿ, ರಿಯೋಡಿ ಜನೈರೋದಲ್ಲಿ ಜರುಗಿದ ಪರಿಸರ ಮತ್ತು ಅಭಿವೃದ್ಧಿ ಕುರಿತ ವಿಶ್ವಸಂಸ್ಥೆಯ ಸಮ್ಮೇಳನದಲ್ಲಿ ಭಾರತವೂ ಭಾಗವಹಿಸಿದ್ದು, ಆ ಸಮ್ಮೇಳನದಲ್ಲಿ ಮಾಲಿನ್ಯದಿಂದ ಮತ್ತು ಇತರ ಪರಿಸರ ಹಾನಿಯಿಂದ ತೊಂದರೆಗೊಳಗಾದವರ ಸಂಕಷ್ಟವನ್ನು ನಿವಾರಿಸುವುದು ಮತ್ತು ಅವರಿಗೆ ಪರಿಹಾರ ಒದಗಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಹೊಣೆಗಾರಿಕೆ ಮತ್ತು ಪರಿಹಾರ ಕುರಿತಂತೆ ರಾಷ್ಟ್ರೀಯ ಕಾನೂನುಗಳನ್ನು ರೂಪಿಸುವುದು ಒಳಗೊಂಡಂತೆ ನ್ಯಾಯಿಕ ಮತ್ತು ಆಡಳಿತಾತ್ಮಕ ವ್ಯವಹರಣೆಗಳು ಸುಲಭವಾಗಿ ದೊರೆಯುವಂತೆ ಮಾಡಲು ಪರಿಣಾಮಕಾರಿ ವ್ಯವಸ್ಥೆಗಳನ್ನು ಮಾಡುವಂತೆ ರಾಷ್ಟ್ರಗಳಿಗೆ ಕರೆ ನೀಡಿ ನಿರ್ಣಯಗಳನ್ನು ಕೈಗೊಂಡಿರುವುದರಿಂದ;

ಮತ್ತು ಭಾರತದಲ್ಲಿ ನ್ಯಾಯಾಲಯಗಳು ನೀಡಿದ ತೀರ್ಪುಗಳಲ್ಲಿ, ಆರೋಗ್ಯಕರ ಪರಿಸರಕ್ಕೆ ನಮಗಿರುವ ಹಕ್ಕನ್ನು ನಮ್ಮ ಸಂವಿಧಾನದ ಅನುಚ್ಛೇದ 21ರಲ್ಲಿ ನಿರೂಪಿಸಿರುವ ಜೀವಿಸುವುದಕ್ಕೆ ಇರುವ ಹಕ್ಕಿನ ಭಾಗ ಎಂಬುದಾಗಿ ಅರ್ಥೈಸಿರುವುದರಿಂದ;

ಮತ್ತು ಆ ಸಮ್ಮೇಳನಗಳಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಕಾರ್ಯಗತಗೊಳಿಸುವುದು ಮತ್ತು ಪರಿಸರಕ್ಕೆ ಸಂಬಂಧಿಸಿದಂತೆ ಬಹು-ಬಗೆಯ ವಿವಾದಗಳು ಒಳಗೊಂಡಿರುವುದರಿಂದಾಗಿ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವನ್ನು ಸ್ಥಾಪಿಸುವುದು ವಿಹಿತವೆಂದು ಪರಿಗಣಿಸಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ I

### ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010 ಎಂದು ಕರೆಯತಕ್ಕದ್ದು.

(2) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ದುರ್ಘಟನೆ" ಎಂದರೆ, ಯಾವುದೇ ಅಪಾಯಕಾರಿ ವಸ್ತುವನ್ನು ಅಥವಾ ಸಲಕರಣೆಯನ್ನು ಅಥವಾ ಸ್ಥಾವರವನ್ನು ಅಥವಾ ವಾಹನವನ್ನು ನಿರ್ವಹಿಸುವಾಗ ನಿರಂತರವಾಗಿ ಆಗಾಗ್ಗೆ ಅಥವಾ ಪದೇಪದೇ ಯಾರೇ ವ್ಯಕ್ತಿಯ ಸಾವಿಗೆ ಅಥವಾ ಕ್ಷತಿಗೆ ಅಥವಾ ಯಾವುದೇ ಸ್ವತ್ತಿಗೆ ಅಥವಾ ಪರಿಸರಕ್ಕೆ ಹಾನಿ ಉಂಟು ಮಾಡುವುದಕ್ಕೆ ಕಾರಣವಾಗುವಂಥ ಆಕಸ್ಮಿಕ ಅಥವಾ ಅನಿರೀಕ್ಷಿತ ಅಥವಾ ಅನುದ್ದೇಶಿತ ಘಟನೆಯನ್ನು ಒಳಗೊಂಡ ದುರ್ಘಟನೆ, ಆದರೆ ಯುದ್ಧದ ಅಥವಾ ನಾಗರಿಕ ಕ್ಷೋಭೆಯ ಕಾರಣ ಮಾತ್ರದಿಂದಲೇ ಸಂಭವಿಸುವಂಥ ದುರ್ಘಟನೆಯು ಒಳಗೊಳ್ಳುವುದಿಲ್ಲ;

(ಬಿ) "ಅಧ್ಯಕ್ಷ" ಎಂದರೆ, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಅಧ್ಯಕ್ಷ;

(ಸಿ) "ಪರಿಸರ"ದಲ್ಲಿ ನೀರು, ಗಾಳಿ ಮತ್ತು ಭೂಮಿ ಮತ್ತು ನೀರಿನಲ್ಲಿ, ಗಾಳಿಯಲ್ಲಿ ಮತ್ತು ಭೂಮಿಯಲ್ಲಿ ಹಾಗೂ ಮಾನವ ಜೀವಿಗಳಲ್ಲಿ, ಇತರ ಜೀವ ಸಂಕುಲಗಳಲ್ಲಿ, ಸಸ್ಯಗಳಲ್ಲಿ, ಸೂಕ್ಷ್ಮಾಣು ಜೀವಿಗಳಲ್ಲಿ ಮತ್ತು ಪ್ರಕೃತಿಯಲ್ಲಿ ಮತ್ತು ಅವುಗಳ ನಡುವೆ ಇರುವ ಅಂತರ್ ಸಂಬಂಧವು ಒಳಗೊಳ್ಳುತ್ತದೆ;

(ಡಿ) "ತಜ್ಞ ಸದಸ್ಯ" ಎಂದರೆ, ಯಾವ ವ್ಯಕ್ತಿಯು ನ್ಯಾಯಾಧಿಕರಣದಲ್ಲಿ ತಜ್ಞ ಸದಸ್ಯ ಎಂಬುದಾಗಿ ನೇಮಕಗೊಳ್ಳುವನೋ ಮತ್ತು ಪ್ರಕರಣ 5ರ ಉಪಪ್ರಕರಣ (2)ರಲ್ಲಿ ನಿರ್ದಿಷ್ಟಪಡಿಸಿರುವ ಅರ್ಹತೆಗಳನ್ನು ಹೊಂದಿರುವವನೋ ಮತ್ತು ನ್ಯಾಯಿಕ ಸದಸ್ಯನಲ್ಲವೋ ಅಂಥ ಸದಸ್ಯ;

(ಇ) ಯಾವುದೇ ಅಪಾಯಕಾರಿ ವಸ್ತುವಿನ ಸಂದರ್ಭದಲ್ಲಿ "ನಿರ್ವಹಣೆ" ಎಂದರೆ, ಅಂಥ ಅಪಾಯಕಾರಿ ವಸ್ತುವಿನ ತಯಾರಿಕೆ, ಸಂಸ್ಕರಣೆ, ಅದನ್ನು ಪ್ರಕ್ರಿಯೆಗೆ ಒಳಪಡಿಸುವುದು, ಅದರ ಪ್ಯಾಕೇಜು, ದಾಸ್ತಾನು, ಸಾಗಾಣಿಕೆ, ಬಳಕೆ, ಸಂಗ್ರಹಣೆ, ಅದನ್ನು ನಾಶಗೊಳಿಸುವುದು, ಪರಿವರ್ತಿಸುವುದು, ಮಾರಾಟಕ್ಕೆ ಇಡುವುದು, ವರ್ಗಾಯಿಸುವುದು ಅಥವಾ ಅದೇ ರೀತಿಯ ಕಾರ್ಯ;

(ಎಫ್) "ಅಪಾಯಕಾರಿ ವಸ್ತು" ಎಂದರೆ, ಪರಿಸರ (ಸಂರಕ್ಷಣಾ) ಅಧಿನಿಯಮ, 1986 (1986ರ 29)ರಲ್ಲಿ ಯಾವ ವಸ್ತುವನ್ನು ಅಥವಾ ಯಾವ ಪದಾರ್ಥವನ್ನು ಅಪಾಯಕಾರಿ ವಸ್ತುವೆಂದು ಪರಿಭಾಷಿಸಲಾಗಿದೆಯೋ ಮತ್ತು

---

* ಅಕ್ಟೋಬರ್ 18, 2010ರಂದು ಜಾರಿಗೆ ಬಂದಿದೆ: ಅಧಿಸೂಚನೆ ಸಂಖ್ಯೆ. ಎಸ್. ಒ 2569 (ಇ), ದಿನಾಂಕ: 18ನೇ ಅಕ್ಟೋಬರ್, 2010. ಭಾರತ ವಿಶೇಷ ರಾಜಪತ್ರ, ಭಾಗ–II, ವಿಭಾಗ 3 (ii).

ಯಾವ ವಸ್ತುವು ಅಥವಾ ಪದಾರ್ಥವು ಸಾರ್ವಜನಿಕ ಹೊಣೆಗಾರಿಕೆ ವಿಮಾ ಅಧಿನಿಯಮ, 1991 (1991ರ 6) ರ ಮೇರೆಗೆ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಿರುವ ಅಥವಾ ನಿರ್ದಿಷ್ಟಪಡಿಸಬಹುದಾದ ಅಪಾಯದ ಪರಿಮಾಣವನ್ನು ಮೀರಿದೆಯೋ ಅಂಥ ಯಾವುದೇ ವಸ್ತು ಅಥವಾ ಪದಾರ್ಥ;

(ಜಿ) "ಕ್ಷತಿ"ಯಲ್ಲಿ ದುರ್ಘಟನೆಯಿಂದಾಗಿ ಉಂಟಾಗುವ ಶಾಶ್ವತ, ಭಾಗಶಃ ಅಥವಾ ಪೂರ್ಣ ಅಶಕ್ತತೆ ಅಥವಾ ವ್ಯಾಧಿಗ್ರಸ್ಥತೆ ಒಳಗೊಳ್ಳುತ್ತದೆ;

(ಹೆಚ್) "ನ್ಯಾಯಿಕ ಸದಸ್ಯ" ಎಂದರೆ, ಯಾವ ವ್ಯಕ್ತಿಯು ನ್ಯಾಯಾಧಿಕರಣದಲ್ಲಿ ಪ್ರಕರಣ 5ರ ಉಪಪ್ರಕರಣ (1)ರ ಮೇರೆಗೆ ನ್ಯಾಯಿಕ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗಿರುವನೋ ಅಂಥ ಸದಸ್ಯ ಮತ್ತು ಅದರಲ್ಲಿ ಅಧ್ಯಕ್ಷನೂ ಒಳಗೊಳ್ಳುತ್ತಾನೆ;

(ಐ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಜೆ) "ವ್ಯಕ್ತಿ" ಎಂಬುದರಲ್ಲಿ,–

(i) ಒಬ್ಬ ವ್ಯಕ್ತಿಯನ್ನು;

(ii) ಹಿಂದೂ ಅವಿಭಕ್ತ ಕುಟುಂಬವನ್ನು;

(iii) ಕಂಪನಿಯನ್ನು;

(iv) ಫರ್ಮನ್ನು;

(v) ವ್ಯಕ್ತಿಗಳ ಸಂಘವನ್ನು ಅಥವಾ ವ್ಯಕ್ತಿಗಳ ನಿಕಾಯವನ್ನು, ಅದು ನಿಗಮಿತವಾಗಿರಲಿ ಅಥವಾ ನಿಗಮಿತವಾಗಿಲ್ಲದಿರಲಿ;

(vi) ನ್ಯಾಸದ ನ್ಯಾಸದಾರಿಯನ್ನು;

(vii) ಸ್ಥಳೀಯ ಪ್ರಾಧಿಕಾರವನ್ನು; ಮತ್ತು

(viii) ಈ ಹಿಂದಿನ ಯಾವುದೇ ಉಪ–ಖಂಡಗಳ ವ್ಯಾಪ್ತಿಯಲ್ಲಿ ಬರದಂಥ ಪ್ರತಿಯೊಬ್ಬ ಕಾಲ್ಪನಿಕ ನ್ಯಾಯಿಕ ವ್ಯಕ್ತಿಯನ್ನು

– ಒಳಗೊಳ್ಳುತ್ತದೆ;

(ಕೆ) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಲ್) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಅನುಬಂಧಿಸಿರುವ Iನೇ, IIನೇ ಮತ್ತು IIIನೇ ಅನುಸೂಚಿಗಳು;

(ಎಂ) "ಪರಿಸರಕ್ಕೆ ಸಂಬಂಧಿಸಿದ ಗಣನೀಯ ಪ್ರಶ್ನೆ"ಯು, ಯಾವ ನಿರ್ದಿಷ್ಟ ಸಂದರ್ಭದಲ್ಲಿ,–

(i) ವ್ಯಕ್ತಿಯಿಂದ ಆಗುವ ಯಾವ ನಿರ್ದಿಷ್ಟ ಶಾಸನಬದ್ಧ ಪರಿಸರ ಹೊಣೆಗಾರಿಕೆಯ ನೇರ ಉಲ್ಲಂಘನೆಯಿಂದಾಗಿ,–

(ಎ) ಒಬ್ಬ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳ ಗುಂಪನ್ನು ಹೊರತುಪಡಿಸಿ ಒಟ್ಟಾರೆ ಜನ ಸಮುದಾಯವು ಪರಿಸರ ಪರಿಣಾಮಗಳಿಂದ ತೊಂದರೆಗೊಳಗಾಗಿದೆಯೋ ಅಥವಾ ತೊಂದರೆಗೆ ಒಳಗಾಗುವ ಸಂಭವವಿದೆಯೋ; ಅಥವಾ

(ಬಿ) ಪರಿಸರಕ್ಕೆ ಅಥವಾ ಸ್ವತ್ತಿಗೆ ಆಗುವ ಹಾನಿಯ ತೀವ್ರತೆಯು ಗಣನಾರ್ಹವಾದುದಾಗಿದೆಯೋ; ಅಥವಾ

(ಸಿ) ಸಾರ್ವಜನಿಕರ ಆರೋಗ್ಯಕ್ಕೆ ಆಗುವ ಹಾನಿಯ ಪ್ರಮಾಣವನ್ನು ಸ್ಥೂಲವಾಗಿ ತಿಳಿದುಕೊಳ್ಳಬಹುದೋ

– ಅಂಥ ನೇರ ಉಲ್ಲಂಘನೆಯು;

(ii) ಮಾಲಿನ್ಯದ ನಿರ್ದಿಷ್ಟ ಕಾರ್ಯಚಟುವಟಿಕೆಗೆ ಅಥವಾ ನಿರ್ದಿಷ್ಟ ಮೂಲಕ್ಕೆ ಸಂಬಂಧಿಸಿದ ಪರಿಸರ ಪರಿಣಾಮಗಳು

– ಉಂಟಾಗುತ್ತವೆಯೋ ಆ ನಿರ್ದಿಷ್ಟ ಸಂದರ್ಭವನ್ನು ಒಳಗೊಳ್ಳತಕ್ಕದ್ದು;

(ಎನ್) "ನ್ಯಾಯಾಧಿಕರಣ" ಎಂದರೆ, ಪ್ರಕರಣ 3ರ ಮೇರೆಗೆ ಸ್ಥಾಪಿಸಿದ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ;

(ಒ) "ಕೆಲಸಗಾರ" ಪದಕ್ಕೆ ಕೆಲಸಗಾರರ ನಷ್ಟಪರಿಹಾರ ಅಧಿನಿಯಮ, 1923 (1923ರ 8)ರಲ್ಲಿ ಅದಕ್ಕೆ ನೀಡಿರುವ ಅರ್ಥವೇ ಇರುತ್ತದೆ.

(2) ಈ ಅಧಿನಿಯಮದಲ್ಲಿ ಬಳಸಲಾಗಿರುವ ಆದರೆ ಇದರಲ್ಲಿ ಪರಿಭಾಷಿಸಿರದ ಮತ್ತು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974 (1974ರ 6)ರಲ್ಲಿ, ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಉಪಕರ ಅಧಿನಿಯಮ, 1977 (1977ರ 36)ರಲ್ಲಿ, ಅರಣ್ಯ (ಸಂರಕ್ಷಣೆ) ಅಧಿನಿಯಮ, 1980 (1980ರ 69)ರಲ್ಲಿ, ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (1981ರ 14)ರಲ್ಲಿ, ಪರಿಸರ (ಸಂರಕ್ಷಣಾ) ಅಧಿನಿಯಮ, 1986 (1986ರ 29)ರಲ್ಲಿ, ಸಾರ್ವಜನಿಕ ಹೊಣೆಗಾರಿಕೆ ವಿಮಾ ಅಧಿನಿಯಮ, 1991 (1991ರ 6)ರಲ್ಲಿ ಮತ್ತು ಜೈವಿಕ ವೈವಿಧ್ಯತೆ ಅಧಿನಿಯಮ, 2002 (2003ರ 18)ರಲ್ಲಿ – ಮತ್ತು ಪರಿಸರಕ್ಕೆ ಸಂಬಂಧಿಸಿದ ಇತರ ಅಧಿನಿಯಮಗಳಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮಗಳಲ್ಲಿ, ಅನುಕ್ರಮವಾಗಿ ಅವುಗಳಿಗೆ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು.

## ಅಧ್ಯಾಯ II

## ನ್ಯಾಯಾಧಿಕರಣದ ಸ್ಥಾಪನೆ

**3. ನ್ಯಾಯಾಧಿಕರಣದ ಸ್ಥಾಪನೆ.–** ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕದಿಂದ ಜಾರಿಗೆ ಬರುವಂತೆ, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಎಂಬ

ನ್ಯಾಯಾಧಿಕರಣವನ್ನು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಂಥ ನ್ಯಾಯಾಧಿಕರಣಕ್ಕೆ ಪ್ರದತ್ತವಾದ ಪ್ರದೇಶಾಧಿಕಾರ ವ್ಯಾಪ್ತಿಯನ್ನು, ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಚಲಾಯಿಸುವ ಸಲುವಾಗಿ ಸ್ಥಾಪಿಸತಕ್ಕದ್ದು.

**4. ನ್ಯಾಯಾಧಿಕರಣದ ರಚನೆ.–** (1) ನ್ಯಾಯಾಧಿಕರಣದಲ್ಲಿ,–

(ಎ) ಒಬ್ಬ ಪೂರ್ಣಾಕಾಲಿಕ ಅಧ್ಯಕ್ಷ;

(ಬಿ) ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ, ಹತ್ತಕ್ಕಿಂತ ಕಡಿಮೆ ಇಲ್ಲದ ಆದರೆ ಗರಿಷ್ಠ ಇಪ್ಪತ್ತನ್ನು ಮೀರದಷ್ಟು ಪೂರ್ಣಕಾಲಿಕ ನ್ಯಾಯಿಕ ಸದಸ್ಯರು;

(ಸಿ) ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ಹತ್ತಕ್ಕಿಂತ ಕಡಿಮೆ ಇಲ್ಲದ ಗರಿಷ್ಠ ಇಪ್ಪತ್ತನ್ನು ಮೀರದ ಪೂರ್ಣಕಾಲಿಕ ತಜ್ಞ ಸದಸ್ಯರು

– ಇರತಕ್ಕದ್ದು.

(2) ನ್ಯಾಯಾಧಿಕರಣದ ಅಧ್ಯಕ್ಷನು, ನ್ಯಾಯಾಧಿಕರಣದ ಮುಂದೆ ಇರುವ ಒಂದು ನಿರ್ದಿಷ್ಟ ಪ್ರಕರಣದಲ್ಲಿ ನ್ಯಾಯಾಧಿಕರಣಕ್ಕೆ ನೆರವಾಗಲು ಆ ನಿರ್ದಿಷ್ಟ ಪ್ರಕರಣದ ಬಗ್ಗೆ ವಿಶೇಷವಾದ ಜ್ಞಾನವನ್ನು ಮತ್ತು ಅನುಭವವನ್ನು ಹೊಂದಿರುವ ಯಾರೇ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳನ್ನು ಆಹ್ವಾನಿಸುವುದು ಅವಶ್ಯಕವೆಂದು ಪರಿಗಣಿಸಿದರೆ ಅವನು ಹಾಗೆ ಮಾಡಬಹುದು.

(3) ಕೇಂದ್ರ ಸರ್ಕಾರವು, ನ್ಯಾಯಾಧಿಕರಣದ, ಉಪವೇಶನ ನಡೆಯುವ ಸಾಮಾನ್ಯ ಸ್ಥಳವನ್ನು ಅಥವಾ ಸ್ಥಳಗಳನ್ನು ಮತ್ತು ಉಪವೇಶನದ ಅಂಥ ಪ್ರತಿಯೊಂದು ಸ್ಥಳದ ವ್ಯಾಪ್ತಿಯಲ್ಲಿ ಬರುವ ರಾಜ್ಯಕ್ಷೇತ್ರಿಯ ವ್ಯಾಪ್ತಿಯನ್ನು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದು.

(4) ಕೇಂದ್ರ ಸರ್ಕಾರವು, ನ್ಯಾಯಾಧಿಕರಣದ ಅಧ್ಯಕ್ಷನೊಂದಿಗೆ ಸಮಾಲೋಚಿಸಿ, ಈ ಮುಂದಿನ ನಿಯಮಗಳು ಒಳಗೊಂಡಂತೆ ನ್ಯಾಯಾಧಿಕರಣದ ಪದ್ಧತಿಗಳನ್ನು ಮತ್ತು ಕಾರ್ಯವಿಧಾನವನ್ನು ಸಾಮಾನ್ಯವಾಗಿ ವಿನಿಯಮಿಸುವಂಥ ನಿಯಮಗಳನ್ನು ರಚಿಸಬಹುದು ಎಂದರೆ:–

(ಎ) ನ್ಯಾಯಾಧಿಕರಣದ ಮುಂದೆ ಹಾಜರಾಗಲು ಹಕ್ಕುಳ್ಳ ವ್ಯಕ್ತಿಗಳಿಗೆ ಸಂಬಂಧಿಸಿದ ನಿಯಮಗಳು;

(ಬಿ) ಉಪಪ್ರಕರಣ (3)ರಲ್ಲಿ ತಿಳಿಸಿದ ಪ್ರದೇಶಾಧಿಕಾರ ವ್ಯಾಪ್ತಿಯೊಳಗೆ ಬರುವ ಅದರ ಉಪವೇಶನದ ಸಾಮಾನ್ಯ ಸ್ಥಳವಲ್ಲದ ಸ್ಥಳದಲ್ಲಿ ವಿಚಾರಣೆ ನಡೆಸುವುದಕ್ಕೆ ಸಂಬಂಧಿಸಿದ ಸಂಚಾರಿ ಕಾರ್ಯವಿಧಾನವು ಒಳಗೊಂಡಂತೆ, ಅರ್ಜಿಗಳ ಮತ್ತು ಅಪೀಲುಗಳ ಹಾಗೂ ಅರ್ಜಿಗಳಿಗೆ ಮತ್ತು ಅಪೀಲುಗಳಿಗೆ ಸಂಬಂಧಿಸಿದ ಇತರ ವಿಷಯಗಳ ವಿಚಾರಣೆಗೆ ಸಂಬಂಧಿಸಿದ ಕಾರ್ಯವಿಧಾನ ನಿಯಮಗಳು;

(ಸಿ) ಯಾವುದೇ ವರ್ಗದ ಅಥವಾ ವರ್ಗಗಳ ಅರ್ಜಿಗಳ ಮತ್ತು ಅಪೀಲುಗಳ ಸಂಬಂಧದಲ್ಲಿ ಅರ್ಜಿಗಳನ್ನು ಮತ್ತು ಅಪೀಲುಗಳನ್ನು ವಿಚಾರಣೆ ಮಾಡತಕ್ಕ ಸದಸ್ಯರ ಕನಿಷ್ಠ ಸಂಖ್ಯೆ:

ಪರಂತು, ಅರ್ಜಿಯನ್ನು ಅಥವಾ ಅಪೀಲನ್ನು ವಿಚಾರಣೆ ಮಾಡುವಾಗ ಇರಬೇಕಾದ ತಜ್ಞ ಸದಸ್ಯರ ಸಂಖ್ಯೆಯು ಅಂಥ ಅರ್ಜಿಯನ್ನು ಅಥವಾ ಅಪೀಲನ್ನು ವಿಚಾರಣೆ ಮಾಡುವ ನ್ಯಾಯಿಕ ಸದಸ್ಯರ ಸಂಖ್ಯೆಯಷ್ಟೇ ಇರತಕ್ಕದ್ದು;

(ಡಿ) ಅಧ್ಯಕ್ಷನು ಉಪವೇಶನದ (ಸಾಮಾನ್ಯ ಸ್ಥಳವೂ ಒಳಗೊಂಡಂತೆ) ಉಪವೇಶನದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರಕರಣಗಳನ್ನು ವರ್ಗಾಯಿಸುವುದಕ್ಕೆ ಸಂಬಂಧಿಸಿದ ನಿಯಮಗಳು.

**5. ಅಧ್ಯಕ್ಷನ, ನ್ಯಾಯಿಕ ಸದಸ್ಯರ ಮತ್ತು ತಜ್ಞ ಸದಸ್ಯರ ನೇಮಕಕ್ಕೆ ಅರ್ಹತೆಗಳು.–** (1) ವ್ಯಕ್ತಿಯು ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಅಥವಾ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಹೊರತು ಅವನು ನ್ಯಾಯಾಧಿಕರಣದ ಅಧ್ಯಕ್ಷನಾಗಿ ಅಥವಾ ನ್ಯಾಯಿಕ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ:

ಪರಂತು, ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ವ್ಯಕ್ತಿಯೂ ಸಹ ನ್ಯಾಯಿಕ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು.

(2) ವ್ಯಕ್ತಿಯು,–

(ಎ) ಡಾಕ್ಟರೇಟ್ ಪದವಿಯೊಂದಿಗೆ ಮಾಸ್ಟರ್ ಆಫ್ ಸೈನ್ಸ್ ನಲ್ಲಿ (ಭೌತ ವಿಜ್ಞಾನಗಳಲ್ಲಿ ಅಥವಾ ಜೀವ ವಿಜ್ಞಾನಗಳಲ್ಲಿ) ಅಥವಾ ಮಾಸ್ಟರ್ ಆಫ್ ಎಂಜಿನಿಯರಿಂಗ್‌ನಲ್ಲಿ ಅಥವಾ ಮಾಸ್ಟರ್ ಆಫ್ ಟೆಕ್ನಾಲಜಿಯಲ್ಲಿ ಪದವಿಯನ್ನು ಮತ್ತು ರಾಷ್ಟ್ರಮಟ್ಟದ ಪ್ರತಿಷ್ಠಿತ ಸಂಸ್ಥೆಯಲ್ಲಿ ಪರಿಸರ ಮತ್ತು ಅರಣ್ಯ ಕ್ಷೇತ್ರದಲ್ಲಿ (ಮಾಲಿನ್ಯ ನಿಯಂತ್ರಣ, ಅಪಾಯಕಾರಿ ವಸ್ತು ನಿರ್ವಹಣೆ, ಪರಿಸರ ಪರಿಣಾಮ ನಿರ್ಧರಣೆ, ವಾಯುಗುಣ ಬದಲಾವಣೆ ನಿರ್ವಹಣೆ, ಜೈವಿಕ ವೈವಿಧ್ಯತೆಯ ನಿರ್ವಹಣೆ ಮತ್ತು ಅರಣ್ಯ ಸಂರಕ್ಷಣೆ ಇವುಗಳನ್ನೊಳಗೊಂಡಂತೆ) ಐದು ವರ್ಷಗಳ ಪ್ರಾಯೋಗಿಕ ಅನುಭವವೂ ಸೇರಿದಂತೆ ಸಂಬಂಧಪಟ್ಟ ಕ್ಷೇತ್ರದಲ್ಲಿ ಹದಿನೈದು ವರ್ಷಗಳ ಅನುಭವವನ್ನು ಹೊಂದಿದ್ದ ಹೊರತು; ಅಥವಾ

(ಬಿ) ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಅಥವಾ ರಾಷ್ಟ್ರೀಯ ಅಥವಾ ರಾಜ್ಯಮಟ್ಟದ ಪ್ರತಿಷ್ಠಿತ ಸಂಸ್ಥೆಯಲ್ಲಿ ಪರಿಸರ ವಿಷಯಗಳ ಬಗ್ಗೆ ವ್ಯವಹರಿಸುವುದರಲ್ಲಿ ಐದು ವರ್ಷದ ಅನುಭವವೂ ಸೇರಿದಂತೆ ಹದಿನೈದು ವರ್ಷಗಳ ಆಡಳಿತಾತ್ಮಕ ಅನುಭವವನ್ನು ಹೊಂದಿದ್ದ ಹೊರತು

– ಆತ ತಜ್ಞ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ.

(3) ನ್ಯಾಯಾಧಿಕರಣದ ಅಧ್ಯಕ್ಷನು, ನ್ಯಾಯಿಕ ಸದಸ್ಯನು ಮತ್ತು ತಜ್ಞ ಸದಸ್ಯನು ನ್ಯಾಯಾಧಿಕರಣದ ಅಧ್ಯಕ್ಷನಾಗಿ, ನ್ಯಾಯಿಕ ಸದಸ್ಯನಾಗಿ ಇರುವ ಅವಧಿಯಲ್ಲಿ ಯಾವುದೇ ಇತರ ಪದವನ್ನು ಧಾರಣ ಮಾಡತಕ್ಕದ್ದಲ್ಲ.

(4) ಅಧ್ಯಕ್ಷನು ಮತ್ತು ಇತರೇ ನ್ಯಾಯಿಕ ಹಾಗೂ ತಜ್ಞ ಸದಸ್ಯರು, ಅವರು ಪದವನ್ನು ಧಾರಣ ಮಾಡಿರುವುದು ನಿಂತುಹೋದ ದಿನಾಂಕದಿಂದ ಎರಡು ವರ್ಷಗಳ ಅವಧಿಯವರೆಗೆ, ಈ ಅಧಿನಿಯಮದ ಮೇರೆಗೆ ನ್ಯಾಯಾಧಿಕರಣದ ಮುಂದೆ ಇರುವ ವ್ಯವಹರಣೆಗೆ ಪಕ್ಷಕಾರನಾಗಿರುವ ಯಾರೇ ವ್ಯಕ್ತಿಯ ವ್ಯವಸ್ಥಾಪನೆಯಲ್ಲಿ ಅಥವಾ ಆಡಳಿತದಲ್ಲಿ ಅಥವಾ ಆ ವ್ಯಕ್ತಿಯ ವ್ಯವಸ್ಥಾಪನೆಗೆ ಅಥವಾ ಆಡಳಿತಕ್ಕೆ ಸಂಬಂಧಿಸಿದಂಥ ಯಾವುದೇ ನಿಯೋಜನೆಯನ್ನು ಒಪ್ಪಿಕೊಳ್ಳತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಥವಾ ಯಾವುದೇ ಶಾಸನಬದ್ಧ ಪ್ರಾಧಿಕಾರದ ಅಥವಾ ಕೇಂದ್ರ, ರಾಜ್ಯ ಅಥವಾ ಪ್ರಾಂತೀಯ

ಅಧಿನಿಯಮದ ಮೂಲಕ ಅಥವಾ ಮೇರೆಗೆ ಸ್ಥಾಪಿಸಿದ ಯಾವುದೇ ನಿಗಮದ ಅಥವಾ ಕಂಪನಿಗಳ ಅಧಿನಿಯಮ, 1956 (1956ರ 1)ರ ಪ್ರಕರಣ 617ರಲ್ಲಿ ಪರಿಭಾಷಿಸಿರುವಂಥ ಸರ್ಕಾರಿ ಕಂಪನಿಯ ಅಡಿಯಲ್ಲಿನ ಯಾವುದೇ ನಿಯೋಜನೆಗೆ ಅನ್ವಯವಾಗತಕ್ಕದ್ದಲ್ಲ.

**6. ಅಧ್ಯಕ್ಷನ, ನ್ಯಾಯಿಕ ಸದಸ್ಯನ ಮತ್ತು ತಜ್ಞ ಸದಸ್ಯನ ನೇಮಕ.–** (1) ಪ್ರಕರಣ 5ರ ಉಪಬಂಧಗಳಿಗೊಳಪಟ್ಟು, ನ್ಯಾಯಾಧಿಕರಣದ ಅಧ್ಯಕ್ಷನನ್ನು, ನ್ಯಾಯಿಕ ಸದಸ್ಯನನ್ನು ಮತ್ತು ತಜ್ಞ ಸದಸ್ಯನನ್ನು ಕೇಂದ್ರ ಸರ್ಕಾರವು ನೇಮಕ ಮಾಡತಕ್ಕದ್ದು.

(2) ಅಧ್ಯಕ್ಷನನ್ನು, ಕೇಂದ್ರ ಸರ್ಕಾರವು ಭಾರತದ ಮುಖ್ಯ ನ್ಯಾಯಾಧೀಶನೊಂದಿಗೆ ಸಮಾಲೋಚಿಸಿ ನೇಮಕ ಮಾಡತಕ್ಕದ್ದು.

(3) ನ್ಯಾಯಾಧಿಕರಣದ ನ್ಯಾಯಿಕ ಸದಸ್ಯರನ್ನು ಮತ್ತು ತಜ್ಞ ಸದಸ್ಯರನ್ನು ನಿಯಮಿಸಬಹುದಾದಂಥ ಆಯ್ಕೆ ಸಮಿತಿಯ ಶಿಫಾರಸ್ಸುಗಳ ಮೇಲೆ ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ನೇಮಕ ಮಾಡತಕ್ಕದ್ದು.

**7. ಅಧ್ಯಕ್ಷನ, ನ್ಯಾಯಿಕ ಸದಸ್ಯನ ಮತ್ತು ತಜ್ಞ ಸದಸ್ಯನ ಪದಾವಧಿ ಮತ್ತು ಸೇವೆಯ ಇತರ ಷರತ್ತುಗಳು.–** ನ್ಯಾಯಾಧಿಕರಣದ ಅಧ್ಯಕ್ಷನು, ನ್ಯಾಯಿಕ ಸದಸ್ಯನು ಮತ್ತು ತಜ್ಞ ಸದಸ್ಯನು, ಅವರು ತಮ್ಮ ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಗೆ ನ್ಯಾಯಾಧಿಕರಣದ ಅಧ್ಯಕ್ಷನಾಗಿ, ನ್ಯಾಯಿಕ ಸದಸ್ಯನಾಗಿ ಮತ್ತು ತಜ್ಞ ಸದಸ್ಯನಾಗಿ ಪದವನ್ನು ಧಾರಣ ಮಾಡತಕ್ಕದ್ದು, ಆದರೆ ಮರು ನೇಮಕಕ್ಕೆ ಅರ್ಹನಾಗಿರತಕ್ಕದ್ದಲ್ಲ:

ಪರಂತು, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ನ್ಯಾಯಾಧೀಶನಾಗಿದ್ದ ವ್ಯಕ್ತಿಯು ನ್ಯಾಯಾಧಿಕರಣದ ಅಧ್ಯಕ್ಷನಾಗಿ ಅಥವಾ ನ್ಯಾಯಿಕ ಸದಸ್ಯನಾಗಿ ನೇಮಕಗೊಂಡ ಸಂದರ್ಭದಲ್ಲಿ ಅವನಿಗೆ ಎಪ್ಪತ್ತು ವರ್ಷಗಳ ವಯಸ್ಸು ಆದ ತರುವಾಯ ಅವನು ಆ ಪದವನ್ನು ಧಾರಣ ಮಾಡತಕ್ಕದ್ದಲ್ಲ:

ಮತ್ತು ಪರಂತು, ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನಾಗಿರುವ ಅಥವಾ ನ್ಯಾಯಾಧೀಶನಾಗಿದ್ದ ವ್ಯಕ್ತಿಯು ನ್ಯಾಯಾಧಿಕರಣದ ಅಧ್ಯಕ್ಷನಾಗಿ ಅಥವಾ ನ್ಯಾಯಿಕ ಸದಸ್ಯನಾಗಿ ನೇಮಕಗೊಂಡ ಸಂದರ್ಭದಲ್ಲಿ ಅವನಿಗೆ ಅರವತ್ತೇಳು ವರ್ಷಗಳ ವಯಸ್ಸು ಆದ ತರುವಾಯ ಅವನು ಆ ಪದವನ್ನು ಧಾರಣ ಮಾಡತಕ್ಕದ್ದಲ್ಲ:

ಮತ್ತೂ ಪರಂತು, ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ನ್ಯಾಯಾಧೀಶನಾಗಿದ್ದ ವ್ಯಕ್ತಿಯು ನ್ಯಾಯಾಧಿಕರಣದ ನ್ಯಾಯಿಕ ಸದಸ್ಯನಾಗಿ ನೇಮಕಗೊಂಡ ಸಂದರ್ಭದಲ್ಲಿ ಅವನಿಗೆ ಅರವತ್ತೇಳು ವರ್ಷಗಳ ವಯಸ್ಸು ಆದ ತರುವಾಯ ಅವನು ಆ ಪದವನ್ನು ಧಾರಣ ಮಾಡತಕ್ಕದ್ದಲ್ಲ:

ಮತ್ತೂ ಪರಂತು, ಯಾರೇ ತಜ್ಞ ಸದಸ್ಯನು ಅವನಿಗೆ ಅರವತ್ತೈದು ವರ್ಷಗಳ ವಯಸ್ಸು ಆದ ತರುವಾಯ ಅವನು ಆ ಪದವನ್ನು ಧಾರಣ ಮಾಡತಕ್ಕದ್ದಲ್ಲ.

**8. ರಾಜೀನಾಮೆ.–** ನ್ಯಾಯಾಧಿಕರಣದ ಅಧ್ಯಕ್ಷನು, ನ್ಯಾಯಿಕ ಸದಸ್ಯನು ಮತ್ತು ತಜ್ಞ ಸದಸ್ಯನು, ತಾನು ಸಹಿ ಮಾಡಿದ ಲಿಖಿತ ನೋಟೀಸನ್ನು ಕೇಂದ್ರ ಸರ್ಕಾರಕ್ಕೆ ನೀಡಿ, ತನ್ನ ಪದಕ್ಕೆ ರಾಜೀನಾಮೆ ನೀಡಬಹುದು.

**9. ಸಂಬಳ, ಭತ್ಯೆಗಳು ಮತ್ತು ಸೇವೆಯ ಇತರೆ ನಿಬಂಧನೆಗಳು ಮತ್ತು ಷರತ್ತುಗಳು.–** ನ್ಯಾಯಾಧಿಕರಣದ ಅಧ್ಯಕ್ಷನಿಗೆ, ನ್ಯಾಯಿಕ ಸದಸ್ಯನಿಗೆ ಮತ್ತು ತಜ್ಞ ಸದಸ್ಯನಿಗೆ ಸಂದಾಯ ಮಾಡಬಹುದಾದ ಸಂಬಳ ಮತ್ತು ಭತ್ಯೆಗಳು ಮತ್ತು ಅವರ ಸೇವೆಯ

ಇತರ ನಿಬಂಧನೆಗಳು ಹಾಗೂ ಷರತ್ತುಗಳು (ನಿವೃತ್ತಿ ವೇತನ, ಉಪದಾನ ಮತ್ತು ಇತರೆ ನಿವೃತ್ತಿ ಪ್ರಯೋಜನಗಳು ಸೇರಿದಂತೆ) ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಅಧ್ಯಕ್ಷನ, ನ್ಯಾಯಿಕ ಸದಸ್ಯನ ಮತ್ತು ತಜ್ಞ ಸದಸ್ಯನ ಸಂಬಳ ಮತ್ತು ಭತ್ಯೆಗಳನ್ನಾಗಲಿ, ಇಲ್ಲವೇ ಸೇವೆಯ ಇತರ ನಿಬಂಧನೆಗಳನ್ನಾಗಲೀ ಮತ್ತು ಷರತ್ತುಗಳನ್ನಾಗಲೀ ಅವರ ನೇಮಕದ ತರುವಾಯ ಅವರಿಗೆ ಅನಾನುಕೂಲವಾಗುವ ರೀತಿಯಲ್ಲಿ ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

**10. ಅಧ್ಯಕ್ಷನನ್ನು, ನ್ಯಾಯಿಕ ಸದಸ್ಯನನ್ನು ಮತ್ತು ತಜ್ಞ ಸದಸ್ಯನನ್ನು ಪದದಿಂದ ತೆಗೆದುಹಾಕುವುದು ಮತ್ತು ಅಮಾನತ್ತುಗೊಳಿಸುವುದು.–** (1) ಕೇಂದ್ರ ಸರ್ಕಾರವು, ಭಾರತದ ಮುಖ್ಯ ನ್ಯಾಯಾಧೀಶನೊಂದಿಗೆ ಸಮಾಲೋಚಿಸಿ,–

(ಎ) ದಿವಾಳಿಯೆಂದು ನ್ಯಾಯ ನಿರ್ಣೀತನಾಗಿರುವ; ಅಥವಾ

(ಬಿ) ಅಪರಾಧವು ನೈತಿಕ ಅಧಃಪತನವನ್ನೊಳಗೊಂಡಿದೆ ಎಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವಂಥ ಅಪರಾಧದ ತಪ್ಪಿತಸ್ಥನೆಂದು ನಿರ್ಣೀತನಾಗಿರುವ; ಅಥವಾ

(ಸಿ) ದೈಹಿಕವಾಗಿ ಅಥವಾ ಮಾನಸಿಕವಾಗಿ ಅಸಮರ್ಥನಾಗಿರುವ; ಅಥವಾ

(ಡಿ) ತನ್ನ ಪ್ರಕಾರ್ಯಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಂಭವವಿರುವಂಥ ಹಣಕಾಸು ಅಥವಾ ಇತರ ಹಿತಾಸಕ್ತಿಯನ್ನು ಹೊಂದಿರುವ; ಅಥವಾ

(ಇ) ಅವನು ಪದದಲ್ಲಿ ಮುಂದುವರಿಯುವುದರಿಂದ ಸಾರ್ವಜನಿಕ ಹಿತಾಸಕ್ತಿಗೆ ಬಾಧಕವಾಗುವಷ್ಟರ ಮಟ್ಟಿಗೆ, ತನ್ನ ಪದವನ್ನು ದುರುಪಯೋಗಪಡಿಸಿಕೊಂಡಿರುವಂಥ

– ನ್ಯಾಯಾಧಿಕರಣದ ಅಧ್ಯಕ್ಷನನ್ನು ಅಥವಾ ನ್ಯಾಯಿಕ ಸದಸ್ಯನನ್ನು ಪದದಿಂದ ತೆಗೆದು ಹಾಕಬಹುದು.

(2) ಅಧ್ಯಕ್ಷನನ್ನು ಅಥವಾ ನ್ಯಾಯಿಕ ಸದಸ್ಯನನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನು ಮಾಡಿದ ವಿಚಾರಣೆಯ ತರುವಾಯ ಕೇಂದ್ರ ಸರ್ಕಾರವು ಹೊರಡಿಸಿದ ಆದೇಶದ ಮೂಲಕ ಹೊರತು, ಆ ಆದೇಶದಲ್ಲಿ ಅಂಥ ಅಧ್ಯಕ್ಷನಿಗೆ ಅಥವಾ ನ್ಯಾಯಿಕ ಸದಸ್ಯನಿಗೆ ಅವನ ವಿರುದ್ಧ ಮಾಡಿರುವ ದೋಷಾರೋಪಣೆಗಳನ್ನು ತಿಳಿಸಿದ್ದ ಹೊರತು ಮತ್ತು ಆ ದೋಷಾರೋಪಣೆಗಳ ಸಂಬಂಧದಲ್ಲಿ ಅಹವಾಲನ್ನು ಹೇಳಿಕೊಳ್ಳಲು ಅವನಿಗೆ ಯುಕ್ತ ಅವಕಾಶವನ್ನು ಸಲ್ಲಿಸಲು ಯುಕ್ತ ಅವಕಾಶವನ್ನು ನೀಡಿದ್ದ ಹೊರತು, ಪದದಿಂದ ತೆಗೆದು ಹಾಕತಕ್ಕದ್ದಲ್ಲ.

(3) ಯಾವ ಅಧ್ಯಕ್ಷನ ಅಥವಾ ನ್ಯಾಯಿಕ ಸದಸ್ಯನ ಸಂಬಂಧದಲ್ಲಿ ಉಪಪ್ರಕರಣ (2)ರ ಮೇರೆಗೆ ಸರ್ವೋಚ್ಚ ನ್ಯಾಯಾಲಯವು ವಿಚಾರಣೆ ನಡೆಸುವುದಕ್ಕೆ ಆದೇಶಿಸಿದೆಯೋ ಆ ಅಧ್ಯಕ್ಷನನ್ನು ಅಥವಾ ನ್ಯಾಯಿಕ ಸದಸ್ಯನನ್ನು, ಅಂಥ ವಿಚಾರಣೆ ಮಾಡಲು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಿಗೆ ವಹಿಸಿದ ಮೇಲೆ ಅವನು ಮಾಡಿದ ವಿಚಾರಣೆಯ ವರದಿಯನ್ನು ಸ್ವೀಕರಿಸಿದ ತರುವಾಯ ಕೇಂದ್ರ ಸರ್ಕಾರವು ಆದೇಶವನ್ನು ಹೊರಡಿಸುವವರೆಗೆ ಕೇಂದ್ರ ಸರ್ಕಾರವು ಅಮಾನತ್ತಿನಲ್ಲಿ ಇಡಬಹುದು.

(4) ಕೇಂದ್ರ ಸರ್ಕಾರವು, ನಿಯಮಗಳ ಮೂಲಕ ಉಪಪ್ರಕರಣ (2)ರಲ್ಲಿ ತಿಳಿಸಿದ ವಿಚಾರಣೆಗಾಗಿ ಕಾರ್ಯವಿಧಾನವನ್ನು ವಿನಿಯಮಿಸಬಹುದು.

(5) ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ಕಾರಣಗಳ ಮೇಲೆ ಮತ್ತು ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂಥ ಕಾರ್ಯವಿಧಾನಕ್ಕೆ ಅನುಸಾರವಾಗಿ ಕೇಂದ್ರ ಸರ್ಕಾರದ ಆದೇಶದ ಮೂಲಕ ತಜ್ಞ ಸದಸ್ಯನನ್ನು ಅವನ ಪದದಿಂದ ತೆಗೆದುಹಾಕಬಹುದು:

ಪರಂತು, ಈ ವಿಷಯದಲ್ಲಿ ಅಹವಾಲನ್ನು ಹೇಳಿಕೊಳ್ಳಲು ತಜ್ಞ ಸದಸ್ಯನಿಗೆ ಅವಕಾಶವನ್ನು ನೀಡಿದ್ದ ಹೊರತು ಅವನನ್ನು ಪದದಿಂದ ತೆಗೆದುಹಾಕತಕ್ಕದ್ದಲ್ಲ.

**10ಎ. ಅಧ್ಯಕ್ಷನ, ನ್ಯಾಯಿಕ ಸದಸ್ಯರ ಮತ್ತು ತಜ್ಞ ಸದಸ್ಯರ ಸೇವೆಯ ಅರ್ಹತೆಗಳು, ನಿಬಂಧನೆಗಳು ಮತ್ತು ಷರತ್ತುಗಳು.–** ಈ ಅಧಿನಿಯಮದಲ್ಲಿ, ಏನೇ ಒಳಗೊಂಡಿದ್ದಾಗ್ಯೂ, ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021ರ ಪ್ರಾರಂಭದ ತರುವಾಯ ನೇಮಕಗೊಂಡ ಅಧ್ಯಕ್ಷನ, ನ್ಯಾಯಿಕ ಸದಸ್ಯರ ಮತ್ತು ತಜ್ಞ ಸದಸ್ಯರ ಸೇವೆಯ ಅರ್ಹತೆಗಳಿಗೆ, ನೇಮಕಕ್ಕೆ, ಪದಾವಧಿಗೆ, ಸಂಬಳಗಳು ಮತ್ತು ಭತ್ಯೆಗಳಿಗೆ, ರಾಜೀನಾಮೆಗೆ, ಸ್ಥಾನದಿಂದ ತೆಗೆದುಹಾಕುವುದಕ್ಕೆ ಮತ್ತು ಇತರ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ, ಆ ಸದರಿ ಅಧಿನಿಯಮದ IIನೇ ಅಧ್ಯಾಯದ ಉಪಬಂಧಗಳು ಅನ್ವಯವಾಗತಕ್ಕದ್ದು:

ಪರಂತು, ಹಣಕಾಸು ಅಧಿನಿಯಮ, 2017ರ ಪ್ರಕರಣ 184ರ ಉಪಬಂಧಗಳು, ಅದರ ಮೇರೆಗೆ ಮಾಡಲಾದ ನಿಯಮಗಳು ಜಾರಿಗೆ ಬರದಿದ್ದಿದ್ದರೆ, ಹಣಕಾಸು ಅಧಿನಿಯಮ, 2017ರ VIನೇ ಅಧ್ಯಾಯದ XIV ಭಾಗದ ಪ್ರಾರಂಭಕ್ಕೂ ಮುಂಚೆ ನೇಮಕಗೊಂಡ ಅಧ್ಯಕ್ಷನಿಗೆ, ನ್ಯಾಯಿಕ ಸದಸ್ಯರಿಗೆ ಮತ್ತು ತಜ್ಞ ಸದಸ್ಯನಿಗೆ ಈ ಅಧಿನಿಯಮದ ಉಪಬಂಧಗಳು ಹೇಗೆ ಅನ್ವಯವಾಗುವುದು ಮುಂದುವರಿಯುತ್ತಿತ್ತೋ ಹಾಗೆಯೇ ಮುಂದುವರಿಯತಕ್ಕದ್ದು.

**11. ಕೆಲವೊಂದು ಸಂದರ್ಭಗಳಲ್ಲಿ ನ್ಯಾಯಾಧಿಕರಣದ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವುದು ಅಥವಾ ಅವನ ಪ್ರಕಾರ್ಯಗಳನ್ನು ನಿರ್ವಹಿಸುವುದು.–** ನ್ಯಾಯಾಧಿಕರಣದ ಅಧ್ಯಕ್ಷನ ಪದವು ಅವನ ಮರಣದಿಂದಾಗಿ, ರಾಜೀನಾಮೆಯಿಂದಾಗಿ ಅಥವಾ ಅನ್ಯಥಾ ತೆರವಾದ ಸಂದರ್ಭದಲ್ಲಿ, ಈ ಬಗ್ಗೆ ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಅಧಿಕೃತಗೊಳಿಸಬಹುದಾದಂಥ ನ್ಯಾಯಾಧಿಕರಣದ ನ್ಯಾಯಿಕ ಸದಸ್ಯನು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಹೊಸ ಅಧ್ಯಕ್ಷನನ್ನು ನೇಮಕ ಮಾಡುವ ದಿನಾಂಕದವರೆಗೆ ಅಧ್ಯಕ್ಷನಾಗಿ ಕಾರ್ಯನಿರ್ವಹಿಸತಕ್ಕದ್ದು.

**12. ನ್ಯಾಯಾಧಿಕರಣದ ಸಿಬ್ಬಂದಿ.–** (1) ಕೇಂದ್ರ ಸರ್ಕಾರವು, ನ್ಯಾಯಾಧಿಕರಣವು ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅದಕ್ಕೆ ನೆರವು ನೀಡಲು ಅಗತ್ಯವಾದ ಅಧಿಕಾರಿಗಳ ಮತ್ತು ಇತರ ನೌಕರರ ಸ್ವರೂಪ ಮತ್ತು ಪ್ರವರ್ಗಗಳನ್ನು ನಿರ್ಧರಿಸತಕ್ಕದ್ದು.

(2) ಅಧ್ಯಕ್ಷನು, ನ್ಯಾಯಾಧಿಕರಣದ ಅಧಿಕಾರಿಗಳ ಮತ್ತು ಇತರ ನೌಕರರ ನೇಮಕವನ್ನು, ನಿಯಮಿಸಬಹುದಾದಂಥ ರೀತಿಯಲ್ಲಿ ಮಾಡತಕ್ಕದ್ದು.

(3) ನ್ಯಾಯಾಧಿಕರಣದ ಅಧಿಕಾರಿಗಳು ಮತ್ತು ಇತರೆ ನೌಕರರು, ಅಧ್ಯಕ್ಷನ ಸಾಮಾನ್ಯ ಮೇಲ್ವಿಚಾರಣೆಯಲ್ಲಿ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) ನ್ಯಾಯಾಧಿಕರಣದ ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳ ಮತ್ತು ಭತ್ಯೆಗಳು ಹಾಗೂ ಸೇವೆಯ ಷರತ್ತುಗಳು ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು.

**13. ಅಧ್ಯಕ್ಷನ ಹಣಕಾಸು ಅಧಿಕಾರಗಳು ಮತ್ತು ಆಡಳಿತಾತ್ಮಕ ಅಧಿಕಾರಗಳು.–** (1) ನ್ಯಾಯಾಧಿಕರಣದ ಅಧ್ಯಕ್ಷನು, ಕೇಂದ್ರ ಸರ್ಕಾರವು ರಚಿಸಿದ ನಿಯಮಗಳ ಮೇರೆಗೆ ತನ್ನಲ್ಲಿ ನಿಹಿತವಾಗಿರಬಹುದಾದಂಥ, ಹಣಕಾಸು ಮತ್ತು ಆಡಳಿತಾತ್ಮಕ ಅಧಿಕಾರಗಳನ್ನು ಚಲಾಯಿಸತಕ್ಕದ್ದು:

ಪರಂತು, ಅಧ್ಯಕ್ಷನು, ಸೂಕ್ತವೆಂದು ತಾನು ಭಾವಿಸಬಹುದಾದಂಥ ತನ್ನ ಹಣಕಾಸು ಮತ್ತು ಆಡಳಿತಾತ್ಮಕ ಅಧಿಕಾರಗಳನ್ನು, ನ್ಯಾಯಾಧಿಕರಣದ ಯಾರೇ ನ್ಯಾಯಿಕ ಸದಸ್ಯನಿಗೆ ಅಥವಾ ತಜ್ಞ ಸದಸ್ಯನಿಗೆ ಅಥವಾ ಅಧಿಕಾರಿಗೆ ವಹಿಸಿಕೊಡತಕ್ಕದ್ದು. ಹಾಗೆ ವಹಿಸಿಕೊಡುವುದು, ಹಾಗೆ ವಹಿಸಿಕೊಟ್ಟ ಅಧಿಕಾರವನ್ನು ಚಲಾಯಿಸುವಾಗ, ಆ ಸದಸ್ಯನು ಅಥವಾ ಅಧಿಕಾರಿಯು ಅಧ್ಯಕ್ಷನ ನಿರ್ದೇಶನದಲ್ಲಿ, ನಿಯಂತ್ರಣದಲ್ಲಿ ಮತ್ತು ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುವುದನ್ನು ಮುಂದುವರೆಸಬೇಕು ಎನ್ನುವ ಷರತ್ತಿಗೆ ಒಳಪಟ್ಟಿರತಕ್ಕದ್ದು.

## ಅಧ್ಯಾಯ III

## ನ್ಯಾಯಾಧಿಕರಣದ ಅಧಿಕಾರವ್ಯಾಪ್ತಿ, ಅಧಿಕಾರಗಳು ಮತ್ತು ವ್ಯವಹರಣೆಗಳು

**14. ನ್ಯಾಯಾಧಿಕರಣವು ವಿವಾದಗಳನ್ನು ಇತ್ಯರ್ಥಪಡಿಸುವುದು.–** (1) ನ್ಯಾಯಾಧಿಕರಣವು ಯಾವ ಪ್ರಕರಣಗಳಲ್ಲಿ ಪರಿಸರಕ್ಕೆ ಸಂಬಂಧಿಸಿದ ಗಣನೀಯ ಪ್ರಶ್ನೆಯು ಒಳಗೊಂಡಿರುತ್ತದೆಯೋ (ಪರಿಸರಕ್ಕೆ ಸಂಬಂಧಿಸಿದ ಯಾವುದೇ ಕಾನೂನು ಹಕ್ಕನ್ನು ಜಾರಿಗೊಳಿಸುವುದೂ ಒಳಗೊಂಡಂತೆ) ಮತ್ತು ಅನುಸೂಚಿ Iರಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಿತಿಗಳನ್ನು ಅನುಷ್ಠಾನಗೊಳಿಸುವಲ್ಲಿ ಉದ್ಭವಿಸುವಂಥ ಪ್ರಶ್ನೆಯು ಒಳಗೊಂಡಂತೆ ಎಲ್ಲಾ ಸಿವಿಲ್ ಪ್ರಕರಣಗಳ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದು.

(2) ನ್ಯಾಯಾಧಿಕರಣವು, ಉಪಪ್ರಕರಣ (1)ರಲ್ಲಿ ತಿಳಿಸಿದ ಪ್ರಶ್ನೆಗಳಿಂದ ಉದ್ಭವಿಸಿದ ವಿವಾದಗಳ ವಿಚಾರಣೆ ನಡೆಸತಕ್ಕದ್ದು ಮತ್ತು ಅಂಥ ವಿವಾದಗಳನ್ನು ಇತ್ಯರ್ಥಪಡಿಸತಕ್ಕದ್ದು ಮತ್ತು ಅವುಗಳ ಮೇಲೆ ಆದೇಶ ಹೊರಡಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ವಿವಾದದ ನ್ಯಾಯನಿರ್ಣಯಕ್ಕಾಗಿ, ಯಾವುದೇ ಅರ್ಜಿಯನ್ನು, ಯಾವ ದಿನಾಂಕದಂದು ಅಂಥ ವಿವಾದದ ವ್ಯಾಜ್ಯಕಾರಣವು ಮೊದಲ ಸಲ ಉದ್ಭವಿಸಿತೋ ಆ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ಅದನ್ನು ಸಲ್ಲಿಸಿದ್ದ ಹೊರತು, ನ್ಯಾಯಾಧಿಕರಣವು ವಿಚಾರಣೆಗೆ ಅಂಗೀಕರಿಸತಕ್ಕದ್ದಲ್ಲ:

ಪರಂತು, ಅರ್ಜಿದಾರನು, ಸದರಿ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸಲು ಸಾಧ್ಯವಾಗಲಿಲ್ಲವೆಂಬುದಕ್ಕೆ ಸಾಕಷ್ಟು ಕಾರಣ ಇತ್ತೆಂದು ನ್ಯಾಯಾಧಿಕರಣಕ್ಕೆ ಮನವರಿಕೆಯಾದರೆ ಅರವತ್ತು ದಿನಗಳಿಗೆ ಮೀರದ ಹೆಚ್ಚಿನ ಅವಧಿಯೊಳಗೆ ಆ ಅರ್ಜಿಯನ್ನು ಸಲ್ಲಿಸುವುದಕ್ಕೆ ಅದು ಅನುಮತಿ ನೀಡಬಹುದು.

**15. ಪರಿಹಾರ, ನಷ್ಟಪರಿಹಾರ ಮತ್ತು ಪೂರ್ವಸ್ಥಿತಿಗೆ ತರುವುದು.–** (1) ನ್ಯಾಯಾಧಿಕರಣವು, ಆದೇಶದ ಮೂಲಕ,–

(ಎ) ಅನುಸೂಚಿ Iರಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಿತಿಗಳ ಮೇರೆಗೆ, (ಯಾವುದೇ ಅಪಾಯಕಾರಿ ಪದಾರ್ಥವನ್ನು ಸಾಗಿಸುವಾಗ ಸಂಭವಿಸುವ ದುರ್ಘಟನೆಯೂ ಸೇರಿದಂತೆ) ಮಾಲಿನ್ಯದಿಂದಾಗಿ ಮತ್ತು ಇತರ ಪರಿಸರ ಹಾನಿಯಿಂದಾಗಿ ಸಂಕಷ್ಟಕ್ಕೆ ಒಳಗಾದ ವ್ಯಕ್ತಿಗಳಿಗೆ ಪರಿಹಾರವನ್ನು ಮತ್ತು ನಷ್ಟಪರಿಹಾರವನ್ನು ನೀಡುವುದಕ್ಕಾಗಿ;

(ಬಿ) ಹಾನಿಗೊಳಗಾದ ಸ್ವತ್ತನ್ನು ಪೂರ್ವಸ್ಥಿತಿಗೆ ತರುವುದಕ್ಕಾಗಿ;

(ಸಿ) ನ್ಯಾಯಾಧಿಕರಣವು ಸೂಕ್ತವೆಂದು ಭಾವಿಸಬಹುದಾದಂಥ ಪ್ರದೇಶದ ಅಥವಾ ಪ್ರದೇಶಗಳ ಪರಿಸರವನ್ನು ಪೂರ್ವಸ್ಥಿತಿಗೆ ತರುವುದಕ್ಕಾಗಿ

– ಉಪಬಂಧ ಕಲ್ಪಿಸಬಹುದು.

(2) ಉಪಪ್ರಕರಣ (1)ರ (ಎ), (ಬಿ) ಮತ್ತು (ಸಿ) ಖಂಡಗಳಲ್ಲಿ ತಿಳಿಸಿದ ಸ್ವತ್ತಿಗೆ ಮತ್ತು ಪರಿಸರಕ್ಕೆ ಸಂಬಂಧಿಸಿದಂತೆ ಪರಿಹಾರ ಮತ್ತು ನಷ್ಟಪರಿಹಾರ ಮತ್ತು ನಷ್ಟಭರ್ತಿಯು, ಸಾರ್ವಜನಿಕ ಹೊಣೆಗಾರಿಕೆ ವಿಮಾ ಅಧಿನಿಯಮ, 1991 (1991ರ 6) ರ ಮೇರೆಗೆ ಸಂದಾಯ ಮಾಡಿದ ಅಥವಾ ಸಂದಾಯ ಮಾಡಬೇಕಾದ ಪರಿಹಾರಕ್ಕೆ ಹೆಚ್ಚಿಗೆಯಾಗಿರತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಯಾವುದೇ ನಷ್ಟಪರಿಹಾರ ನೀಡಿಕೆಗಾಗಿ ಅಥವಾ ಪರಿಹಾರ ನೀಡಿಕೆಗಾಗಿ ಅಥವಾ ಸ್ವತ್ತನ್ನು ಅಥವಾ ಪರಿಸರವನ್ನು ಪೂರ್ವಸ್ಥಿತಿಗೆ ತರುವುದಕ್ಕಾಗಿ ಯಾವುದೇ ಅರ್ಜಿಯನ್ನು, ಅಂಥ ನಷ್ಟಪರಿಹಾರಕ್ಕಾಗಿ ಅಥವಾ ಪರಿಹಾರಕ್ಕಾಗಿ ವ್ಯಾಜ್ಯಕಾರಣವು ಯಾವ ದಿನಾಂಕದಂದು ಮೊದಲು ಉದ್ಭವಿಸಿತ್ತೋ ಆ ದಿನಾಂಕದಿಂದ ಐದು ವರ್ಷಗಳ ಅವಧಿಯೊಳಗೆ ಸಲ್ಲಿಸಿದ್ದ ಹೊರತು, ಅಂಥ ಅರ್ಜಿಯನ್ನು ನ್ಯಾಯಾಧಿಕರಣವು ವಿಚಾರಣೆಗೆ ಅಂಗೀಕರಿಸತಕ್ಕದ್ದಲ್ಲ:

ಪರಂತು, ಅರ್ಜಿದಾರನು ಸದರಿ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸಲು ಸಾಧ್ಯವಾಗಲಿಲ್ಲವೆಂಬುದಕ್ಕೆ ಸಾಕಷ್ಟು ಕಾರಣ ಇತ್ತೆಂದು ನ್ಯಾಯಾಧಿಕರಣಕ್ಕೆ ಮನವರಿಕೆಯಾದರೆ, ಅರವತ್ತು ದಿನಗಳಿಗೆ ಮೀರದ ಹೆಚ್ಚಿನ ಅವಧಿಯೊಳಗೆ ಆ ಅರ್ಜಿಯನ್ನು ಸಲ್ಲಿಸುವುದಕ್ಕೆ ಅದು ಅನುಮತಿ ನೀಡಬಹುದು.

(4) ನ್ಯಾಯಾಧಿಕರಣವು, ಸಾರ್ವಜನಿಕರ ಆರೋಗ್ಯಕ್ಕೆ, ಸ್ವತ್ತಿಗೆ ಮತ್ತು ಪರಿಸರಕ್ಕೆ ಉಂಟಾದ ಹಾನಿಯನ್ನು ಗಮನದಲ್ಲಿಟ್ಟುಕೊಂಡು, ಸೂಕ್ತವೆಂದು ತಾನು ಭಾವಿಸಬಹುದಾದಂತೆ, ಕ್ಲೇಮುದಾರರಿಗೆ ನಷ್ಟಪರಿಹಾರವನ್ನು ಅಥವಾ ಪರಿಹಾರವನ್ನು ಒದಗಿಸುವುದಕ್ಕಾಗಿ ಮತ್ತು ಹಾನಿಗೊಳಗಾದ ಸ್ವತ್ತನ್ನು ಅಥವಾ ಪರಿಸರವನ್ನು ಪೂರ್ವಸ್ಥಿತಿಗೆ ತರುವುದಕ್ಕಾಗಿ ಅನುಸೂಚಿ–II ರಲ್ಲಿ ನಿರ್ದಿಷ್ಟಪಡಿಸಿದ, ಪ್ರತ್ಯೇಕ ಶೀರ್ಷಿಕೆಗಳ ಮೇರೆಗೆ ಸಂದಾಯ ಮಾಡತಕ್ಕ ನಷ್ಟಪರಿಹಾರವನ್ನು ಅಥವಾ ಪರಿಹಾರವನ್ನು ವಿಭಾಗಿಸಿ ಹಂಚಿಕೆ ಮಾಡಬಹುದು.

(5) ಈ ಅಧಿನಿಯಮದ ಮೇರೆಗೆ ನಷ್ಟಪರಿಹಾರವನ್ನು ಅಥವಾ ಪರಿಹಾರವನ್ನು ಕ್ಲೇಮು ಮಾಡುವ ಪ್ರತಿಯೊಬ್ಬ ಕ್ಲೇಮುದಾರನು, ಯಾವುದೇ ಇತರೆ ನ್ಯಾಯಾಲಯಕ್ಕೆ ಅಥವಾ ಪ್ರಾಧಿಕಾರಕ್ಕೆ ಸಲ್ಲಿಸಿದ್ದ ಅರ್ಜಿಯ ಬಗ್ಗೆ ಅಥವಾ ಸಂದರ್ಭಾನುಸಾರ ಆ ನ್ಯಾಯಾಲಯದಿಂದ ಅಥವಾ ಪ್ರಾಧಿಕಾರದಿಂದ ಸ್ವೀಕರಿಸಿರುವ ನಷ್ಟಪರಿಹಾರದ ಅಥವಾ ಪರಿಹಾರದ ಬಗ್ಗೆ ನ್ಯಾಯಾಧಿಕರಣಕ್ಕೆ ತಿಳಿಸತಕ್ಕದ್ದು.

**16. ನ್ಯಾಯಾಧಿಕರಣವು ಅಪೀಲು ವಿಚಾರಣಾ ಅಧಿಕಾರವ್ಯಾಪ್ತಿಯನ್ನು ಹೊಂದಿರುವುದು.–** ಯಾರೇ ವ್ಯಕ್ತಿಯು,–

(ಎ) ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974 (1974ರ 6)ರ ಪ್ರಕರಣ 28ರ ಮೇರೆಗೆ, ಅಪೀಲು ಪ್ರಾಧಿಕಾರವು, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ಆ ತರುವಾಯ ಮಾಡಿದ ಆದೇಶದಿಂದ ಅಥವಾ ನೀಡಿದ ತೀರ್ಮಾನದಿಂದ;

(ಬಿ) ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974 (1974ರ 6)ರ ಪ್ರಕರಣ 29ರ ಮೇರೆಗೆ, ರಾಜ್ಯ ಸರ್ಕಾರವು ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ಆ ತರುವಾಯ ಹೊರಡಿಸಿದ ಆದೇಶದಿಂದ;

(ಸಿ) ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974 (1974ರ 6)ರ ಪ್ರಕರಣ 33ಎ ನ ಮೇರೆಗೆ, ಮಂಡಳಿಯು, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ಆ ತರುವಾಯ ನೀಡಿದ ನಿರ್ದೇಶನಗಳಿಂದ;

(ಡಿ) ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಉಪಕರ ಅಧಿನಿಯಮ, 1977 (1977ರ 36)ರ ಪ್ರಕರಣ 13ರ ಮೇರೆಗೆ ಅಪೀಲು ಪ್ರಾಧಿಕಾರವು ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ಆ ತರುವಾಯ ಮಾಡಿದ ಆದೇಶದಿಂದ ಅಥವಾ ನೀಡಿದ ತೀರ್ಮಾನದಿಂದ;

(ಇ) ಅರಣ್ಯ (ಸಂರಕ್ಷಣೆ) ಅಧಿನಿಯಮ, 1980 (1980ರ 69)ರ ಪ್ರಕರಣ 2ರ ಮೇರೆಗೆ ರಾಜ್ಯ ಸರ್ಕಾರವು ಅಥವಾ ಇತರ ಪ್ರಾಧಿಕಾರವು, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ಆ ತರುವಾಯ ಮಾಡಿದ ಆದೇಶದಿಂದ ಅಥವಾ ನೀಡಿದ ತೀರ್ಮಾನದಿಂದ;

(ಎಫ್) ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (1981ರ 14)ರ ಪ್ರಕರಣ 31ರ ಮೇರೆಗೆ, ಅಪೀಲು ಪ್ರಾಧಿಕಾರವು, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ಆ ತರುವಾಯ ಮಾಡಿದ ಆದೇಶದಿಂದ ಅಥವಾ ನೀಡಿದ ತೀರ್ಮಾನದಿಂದ;

(ಜಿ) ಪರಿಸರ (ಸಂರಕ್ಷಣೆ) ಅಧಿನಿಯಮ, 1986 (1986ರ 29)ರ ಪ್ರಕರಣ 5ರ ಮೇರೆಗೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ಆ ತರುವಾಯ ನೀಡಿದ ಯಾವುದೇ ನಿರ್ದೇಶನದಿಂದ;

(ಹೆಚ್) ಯಾವ ಪ್ರದೇಶದಲ್ಲಿ ಯಾವುವೇ ಕೈಗಾರಿಕೆಗಳನ್ನು, ಕಾರ್ಯಾಚರಣೆಗಳನ್ನು ಅಥವಾ ಕಾರ್ಯವಿಧಾನಗಳನ್ನು ಅಥವಾ ಕೈಗಾರಿಕೆಗಳ ವರ್ಗವನ್ನು, ಕಾರ್ಯಾಚರಣೆಗಳನ್ನು ಮತ್ತು ಕಾರ್ಯವಿಧಾನಗಳನ್ನು ನಡೆಸುವಂತಿಲ್ಲವೋ ಅಥವಾ ಪರಿಸರ (ಸಂರಕ್ಷಣಾ) ಅಧಿನಿಯಮ, 1986 (1986ರ 29)ರ ಮೇರೆಗೆ ಕೆಲವೊಂದು ಸುರಕ್ಷತಾ ಕ್ರಮಗಳಿಗೆ ಒಳಪಟ್ಟು ನಡೆಸಬೇಕೋ ಆ ಪ್ರದೇಶದಲ್ಲಿ ಯಾವುದೇ ಕೈಗಾರಿಕೆಗಳನ್ನು, ಕಾರ್ಯಾಚರಣೆಗಳನ್ನು ಅಥವಾ ಕಾರ್ಯವಿಧಾನಗಳನ್ನು ಅಥವಾ ಕೈಗಾರಿಕೆಗಳ ವರ್ಗವನ್ನು, ಕಾರ್ಯಾಚರಣೆಗಳನ್ನು ಮತ್ತು ಕಾರ್ಯವಿಧಾನಗಳನ್ನು ನಡೆಸುವುದಕ್ಕೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ಆ ತರುವಾಯ ಪರಿಸರ ಅನುಮೋದನೆ ನೀಡಿರುವ ಆದೇಶದಿಂದ;

(ಐ) ಪರಿಸರ (ಸಂರಕ್ಷಣೆ) ಅಧಿನಿಯಮ, 1986 (1986ರ 29)ರ ಮೇರೆಗೆ ಯಾವುದೇ ಕಾರ್ಯಚಟುವಟಿಕೆಯನ್ನು ಅಥವಾ ಕಾರ್ಯಾಚರಣೆಯನ್ನು ಅಥವಾ ಕಾರ್ಯವಿಧಾನವನ್ನು ನಡೆಸುವುದಕ್ಕೆ ಪರಿಸರ ಅನುಮೋದನೆ ನೀಡುವುದನ್ನು ತಿರಸ್ಕರಿಸಿ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ಆ ತರುವಾಯ ಮಾಡಿದ ಆದೇಶದಿಂದ;

(ಜೆ) ಪ್ರಯೋಜನವನ್ನು ಹಂಚಿಕೊಳ್ಳುವುದಕ್ಕಾಗಿ ಜೈವಿಕ ವೈವಿಧ್ಯತೆ ಅಧಿನಿಯಮ, 2002 (2003ರ 18)ರ ಉಪಬಂಧಗಳ ಮೇರೆಗೆ ರಾಷ್ಟ್ರೀಯ ಜೈವಿಕ ವೈವಿಧ್ಯತೆ ಪ್ರಾಧಿಕಾರವು ಅಥವಾ ರಾಜ್ಯ ಜೈವಿಕ ವೈವಿಧ್ಯತೆ ಮಂಡಳಿಯು, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ತರುವಾಯ ಮಾಡಿದ ಯಾವುದೇ ನಿರ್ಧರಣೆಯಿಂದ ಅಥವಾ ಆದೇಶದಿಂದ

– ಬಾಧಿತನಾದರೆ, ಅವನು ಆದೇಶವನ್ನು ಅಥವಾ ತೀರ್ಮಾನವನ್ನು ಅಥವಾ ನಿರ್ದೇಶನವನ್ನು ಅಥವಾ ನಿರ್ಧರಣೆಯನ್ನು ತನಗೆ ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಸಬಹುದು:

ಪರಂತು, ಸದರಿ ಅವಧಿಯೊಳಗೆ ಅಪೀಲನ್ನು ಸಲ್ಲಿಸಲು ಅಪೀಲುದಾರನಿಗೆ ಸಾಕಷ್ಟು ಕಾರಣದಿಂದಾಗಿ ಸಾಧ್ಯವಾಗಲಿಲ್ಲವೆಂದು ನ್ಯಾಯಾಧಿಕರಣಕ್ಕೆ ಮನವರಿಕೆಯಾದರೆ, ಅದು ಅರವತ್ತು ದಿನಗಳಿಗೆ ಮೀರದಂಥ ಹೆಚ್ಚಿನ ಅವಧಿಯೊಳಗೆ ಈ ಪ್ರಕರಣದ ಮೇರೆಗೆ ಅಪೀಲು ಸಲ್ಲಿಸಲು ಅವಕಾಶ ನೀಡಬಹುದು.

**17. ಕೆಲವು ಪ್ರಕರಣಗಳಲ್ಲಿ ಪರಿಹಾರವನ್ನು ಅಥವಾ ನಷ್ಟಪರಿಹಾರವನ್ನು ಸಂದಾಯ ಮಾಡಲು ಹೊಣೆಗಾರಿಕೆ.–** (1) ಅನುಸೂಚಿ–Iರಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಅಧಿನಿಯಮಿತಿಯ ಮೇರೆಗೆ, ದುರ್ಘಟನೆಯಿಂದ ಅಥವಾ ಕಾರ್ಯಚಟುವಟಿಕೆಯಿಂದ ಅಥವಾ ಕಾರ್ಯಾಚರಣೆಯಿಂದ ಅಥವಾ ಕಾರ್ಯವಿಧಾನದಿಂದ ಆದ ಪ್ರತಿಕೂಲ ಪರಿಣಾಮದಿಂದಾಗಿ ಯಾರೇ ವ್ಯಕ್ತಿಯು (ಕೆಲಸಗಾರನನ್ನು ಹೊರತುಪಡಿಸಿ) ಮರಣ ಹೊಂದಿದರೆ ಅಥವಾ ಯಾರೇ ವ್ಯಕ್ತಿಗೆ ಗಾಯವಾದರೆ ಅಥವಾ ಯಾವುದೇ ಸ್ವತ್ತಿಗೆ ಅಥವಾ ಪರಿಸರಕ್ಕೆ ಹಾನಿ ಉಂಟಾದರೆ, ಅದಕ್ಕೆ ಹೊಣೆಗಾರನಾದ ವ್ಯಕ್ತಿಯು ಅನುಸೂಚಿ–IIರಲ್ಲಿ ನಿರ್ದಿಷ್ಟಪಡಿಸಿದ ಎಲ್ಲ ಅಥವಾ ಯಾವುದೇ ಶೀರ್ಷಿಕೆಗಳಲ್ಲಿ ಹೇಳಿರುವಂತೆ, ಮರಣಕ್ಕೆ, ಗಾಯಕ್ಕೆ ಅಥವಾ ಹಾನಿಗೆ ನ್ಯಾಯಾಧಿಕರಣವು ನಿರ್ಧರಿಸಬಹುದಾದಂಥ ಪರಿಹಾರವನ್ನು ಅಥವಾ ನಷ್ಟಪರಿಹಾರವನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

(2) ಅನುಸೂಚಿ–Iರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅಧಿನಿಯಮಿತಿಯ ಮೇರೆಗೆ ದುರ್ಘಟನೆಯಿಂದಾಗಿ ಅಥವಾ ಕಾರ್ಯಚಟುವಟಿಕೆಯ ಅಥವಾ ಕಾರ್ಯಾಚರಣೆಯ ಅಥವಾ ಕಾರ್ಯವಿಧಾನದ ಪ್ರತಿಕೂಲ ಪರಿಣಾಮದಿಂದಾಗಿ ಉಂಟಾದ ಯಾವುದೇ ಮರಣವನ್ನು, ಗಾಯವನ್ನು ಅಥವಾ ಹಾನಿಯನ್ನು, ಯಾವುದೇ ಒಂದು ಕಾರ್ಯಚಟುವಟಿಕೆಯಿಂದ ಅಥವಾ ಕಾರ್ಯಾಚರಣೆಯಿಂದ ಅಥವಾ ಕಾರ್ಯವಿಧಾನದಿಂದ ಆದದ್ದೆಂದು ಹೇಳಲಾಗದಿದ್ದರೆ, ಆದರೆ ಅದು ಅಂಥ ಹಲವಾರು ಕಾರ್ಯಚಟುವಟಿಕೆಗಳ, ಕಾರ್ಯಾಚರಣೆಗಳ ಮತ್ತು ಕಾರ್ಯವಿಧಾನಗಳ ಸಂಯೋಜಿತ ಅಥವಾ ಸಂಘಟಿತ ಪರಿಣಾಮವಾಗಿದ್ದರೆ, ನ್ಯಾಯಾಧಿಕರಣವು, ಪರಿಹಾರ ನೀಡಿಕೆಗೆ ಅಥವಾ ನಷ್ಟಪರಿಹಾರ ನೀಡಿಕೆಗೆ ಸಂಬಂಧಿಸಿದ ಹೊಣೆಗಾರಿಕೆಯನ್ನು ಅಂಥ ಕಾರ್ಯಚಟುವಟಿಕೆಗಳಿಗೆ, ಕಾರ್ಯಾಚರಣೆಗಳಿಗೆ ಮತ್ತು ಕಾರ್ಯವಿಧಾನಗಳಿಗೆ ಹೊಣೆಗಾರರಾದ ವ್ಯಕ್ತಿಗಳ ನಡುವೆ ನ್ಯಾಯಸಮ್ಮತ ಆಧಾರದ ಮೇಲೆ ಹಂಚಿಕೆ ಮಾಡಬಹುದು.

(3) ನ್ಯಾಯಾಧಿಕರಣವು, ದುರ್ಘಟನೆಯ ಸಂದರ್ಭದಲ್ಲಿ ತಪ್ಪು ಯಾರದ್ದೇ ಆದರೂ, ಕ್ಲೇಮುದಾರನ ಹಕ್ಕನ್ನು ಪುರಸ್ಕರಿಸುವ ತತ್ವವನ್ನು ಅನ್ವಯಿಸತಕ್ಕದ್ದು.

**18. ನ್ಯಾಯಾಧಿಕರಣಕ್ಕೆ ಅರ್ಜಿ ಅಥವಾ ಅಪೀಲು.–** (1) ಪ್ರಕರಣ 14 ಮತ್ತು 15ರ ಮೇರೆಗಿನ ಪ್ರತಿಯೊಂದು ಅರ್ಜಿಯನ್ನು ಅಥವಾ ಪ್ರಕರಣ 16ರ ಮೇರೆಗಿನ ಅಪೀಲನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ನ್ಯಾಯಾಧಿಕರಣಕ್ಕೆ

ಸಲ್ಲಿಸತಕ್ಕದ್ದು ಮತ್ತು ಅದು ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರತಕ್ಕದ್ದು ಹಾಗೂ ನಿಯಮಿಸಬಹುದಾದಂಥ ದಸ್ತಾವೇಜುಗಳು ಮತ್ತು ಫೀಜು ಅದರೊಂದಿಗೆ ಇರತಕ್ಕದ್ದು.

(2) ಪ್ರಕರಣ 16ರಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಬಾಧಕವಾಗದಂತೆ ಪರಿಹಾರದ ಅಥವಾ ನಷ್ಟಪರಿಹಾರದ ಮಂಜೂರಾತಿಗಾಗಿ ಅಥವಾ ವಿವಾದ ಇತ್ಯರ್ಥಕ್ಕಾಗಿ ಅರ್ಜಿಯನ್ನು,-

(ಎ) ಕ್ಷತಿಗೆ ಒಳಗಾಗಿರುವ ವ್ಯಕ್ತಿಯು; ಅಥವಾ

(ಬಿ) ಯಾವ ಸ್ವತ್ತಿಗೆ ಹಾನಿ ಉಂಟಾಗಿದೆಯೋ ಆ ಸ್ವತ್ತಿನ ಮಾಲೀಕನು; ಅಥವಾ

(ಸಿ) ಪರಿಸರ ಹಾನಿಯಿಂದ ಮರಣ ಸಂಭವಿಸಿದಲ್ಲಿ ಮೃತರ ಎಲ್ಲ ಅಥವಾ ಯಾರೇ ಕಾನೂನುಸಮ್ಮತ ಪ್ರತಿನಿಧಿಗಳು; ಅಥವಾ

(ಡಿ) ಅಂಥ ವ್ಯಕ್ತಿಯಿಂದ ಅಥವಾ ಅಂಥ ಸ್ವತ್ತಿನ ಮಾಲೀಕನಿಂದ ಕ್ರಮಬದ್ಧವಾಗಿ ಅಧಿಕಾರ ಪಡೆದಿರುವ ಯಾರೇ ಏಜೆಂಟನು ಅಥವಾ ಸಂದರ್ಭಾನುಸಾರ ಮೃತನ ಎಲ್ಲ ಅಥವಾ ಯಾರೇ ಕಾನೂನುಸಮ್ಮತ ಪ್ರತಿನಿಧಿಗಳು; ಅಥವಾ

(ಇ) ಯಾವುದೇ ಪ್ರಾತಿನಿಧಿಕ ಸಂಸ್ಥೆ ಅಥವಾ ಸಂಘಟನೆಯು ಒಳಗೊಂಡಂತೆ ಬಾಧಿತನಾದ ಯಾರೇ ವ್ಯಕ್ತಿಯು; ಅಥವಾ

(ಎಫ್) ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಕೇಂದ್ರಾಡಳಿತ ಪ್ರದೇಶವು ಅಥವಾ ಪರಿಸರ (ಸಂರಕ್ಷಣೆ) ಅಧಿನಿಯಮ, 1986 (1986ರ 29)ರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ರಚಿತವಾದ ಅಥವಾ ಸ್ಥಾಪಿತವಾದ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಅಥವಾ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಅಥವಾ ಮಾಲಿನ್ಯ ನಿಯಂತ್ರಣ ಸಮಿತಿಯು ಅಥವಾ ಸ್ಥಳೀಯ ಪ್ರಾಧಿಕಾರವು ಅಥವಾ ಯಾವುದೇ ಪರಿಸರ ಪ್ರಾಧಿಕಾರವು

– ನ್ಯಾಯಾಧಿಕರಣಕ್ಕೆ ಸಲ್ಲಿಸಬಹುದು:

ಪರಂತು, ಮೃತನ ಎಲ್ಲಾ ಕಾನೂನುಸಮ್ಮತ ಪ್ರತಿನಿಧಿಗಳು, ನಷ್ಟಪರಿಹಾರಕ್ಕಾಗಿ ಅಥವಾ ಪರಿಹಾರಕ್ಕಾಗಿ ಅಥವಾ ವಿವಾದದ ಇತ್ಯರ್ಥಕ್ಕಾಗಿ ಸಲ್ಲಿಸಿದ್ದ ಅಂಥ ಯಾವುದೇ ಅರ್ಜಿಯಲ್ಲಿ ಸೇರಿಲ್ಲದಿದ್ದರೆ ಅರ್ಜಿಯನ್ನು ಮೃತನ ಎಲ್ಲಾ ಕಾನೂನುಸಮ್ಮತ ಪ್ರತಿನಿಧಿಗಳ ಪರವಾಗಿ ಅಥವಾ ಅವರ ಪ್ರಯೋಜನಕ್ಕಾಗಿ ಸಲ್ಲಿಸತಕ್ಕದ್ದು ಮತ್ತು ಹಾಗೆ ಸೇರದಿರುವ ಕಾನೂನುಸಮ್ಮತ ಪ್ರತಿನಿಧಿಗಳನ್ನು ಅರ್ಜಿಗೆ ಪ್ರತಿವಾದಿಗಳನ್ನಾಗಿ ಸೇರಿಸತಕ್ಕದ್ದು:

ಮತ್ತು ಪರಂತು, ವ್ಯಕ್ತಿಯು, ಮಾಲೀಕನು, ಕಾನೂನುಸಮ್ಮತ ಪ್ರತಿನಿಧಿಯು, ಏಜೆಂಟ್‌ನು, ಪ್ರಾತಿನಿಧಿಕ ಸಂಸ್ಥೆಯು ಅಥವಾ ಸಂಘಟನೆಯು ಪ್ರಕರಣ 16ರ ಮೇರೆಗೆ ಅಪೀಲನ್ನು ಸಲ್ಲಿಸಿದ್ದರೆ ಅಂಥ ವ್ಯಕ್ತಿಯು, ಮಾಲೀಕನು, ಕಾನೂನುಸಮ್ಮತ ಪ್ರತಿನಿಧಿಯು, ಏಜೆಂಟ್‌ನು, ಪ್ರಾತಿನಿಧಿಕ ಸಂಸ್ಥೆಯು ಅಥವಾ ಸಂಘಟನೆಯು ಪರಿಹಾರದ ಅಥವಾ ನಷ್ಟಪರಿಹಾರದ ಮಂಜೂರಾತಿಗಾಗಿ ಅಥವಾ ವಿವಾದದ ಇತ್ಯರ್ಥಕ್ಕಾಗಿ ಅರ್ಜಿಯನ್ನು ಸಲ್ಲಿಸಲು ಹಕ್ಕುಳ್ಳವರಾಗಿರತಕ್ಕದ್ದಲ್ಲ.

(3) ಈ ಅಧಿನಿಯಮದ ಮೇರೆಗೆ ನ್ಯಾಯಾಧಿಕರಣಕ್ಕೆ ಸಲ್ಲಿಸಿದ ಅರ್ಜಿಯ ಬಗ್ಗೆ ಅಥವಾ ಸಂದರ್ಭಾನುಸಾರ ಅಪೀಲಿನ ಬಗ್ಗೆ ಸಾಧ್ಯವಾದಷ್ಟು ತ್ವರಿತವಾಗಿ ಕ್ರಮಕೈಗೊಳ್ಳತಕ್ಕದ್ದು ಮತ್ತು ಸಂಬಂಧಿಸಿದ ಪಕ್ಷಕಾರನಿಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ಅರ್ಜಿಯನ್ನು ಅಥವಾ ಸಂದರ್ಭಾನುಸಾರ ಅಪೀಲನ್ನು ಸಲ್ಲಿಸಿದ ದಿನಾಂಕದಿಂದ ಆರು ತಿಂಗಳೊಳಗೆ ಅರ್ಜಿಯನ್ನು ಅಥವಾ ಸಂದರ್ಭಾನುಸಾರ ಅಪೀಲನ್ನು ಅಂತಿಮವಾಗಿ ವಿಲೆ ಮಾಡಲು ಪ್ರಯತ್ನಿಸತಕ್ಕದ್ದು.

**19. ನ್ಯಾಯಾಧಿಕರಣದ ಕಾರ್ಯವಿಧಾನ ಮತ್ತು ಅಧಿಕಾರಗಳು.–** (1) ನ್ಯಾಯಾಧಿಕರಣವು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರಲ್ಲಿ ಗೊತ್ತುಪಡಿಸಿರುವ ಕಾರ್ಯವಿಧಾನಕ್ಕೆ ಬದ್ಧವಾಗಿರಬೇಕಾಗಿಲ್ಲ ಆದರೆ, ಸಹಜ ನ್ಯಾಯ ತತ್ವಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ನ್ಯಾಯಾಧಿಕರಣವು, ತನ್ನ ಕಾರ್ಯವಿಧಾನವನ್ನು ವಿನಿಯಮಿಸಿಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕದ್ದು.

(3) ನ್ಯಾಯಾಧಿಕರಣವು, ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರಲ್ಲಿ ಒಳಗೊಂಡಿರುವ ಸಾಕ್ಷ್ಯ ನಿಯಮಗಳಿಗೂ ಸಹ ಬದ್ಧವಾಗಿರಬೇಕಾಗಿಲ್ಲ.

(4) ನ್ಯಾಯಾಧಿಕರಣವು ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಗಳಿಗಾಗಿ ಈ ಮುಂದಿನ ವಿಷಯಗಳಿಗೆ ಎಂದರೆ:–

(ಎ) ಯಾರೇ ವ್ಯಕ್ತಿಯನ್ನು ಸಮನ್ ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಅವನನ್ನು ಪ್ರಮಾಣ ಮಾಡಿಸಿ ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳನ್ನು ಪತ್ತೆ ಹಚ್ಚಿ ಅವುಗಳನ್ನು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಅಫಿಡಾವಿಟ್‌ಗಳ ಮೇಲೆ ಸಾಕ್ಷ್ಯಗಳನ್ನು ಪಡೆಯುವುದು;

(ಡಿ) ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರ ಪ್ರಕರಣ 123 ಮತ್ತು 124ರ ಉಪಬಂಧಗಳಿಗೊಳಪಟ್ಟು, ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ದಸ್ತಾವೇಜನ್ನು ಅಥವಾ ಅಂಥ ದಾಖಲೆಯ ಅಥವಾ ದಸ್ತಾವೇಜಿನ ಪ್ರತಿಯನ್ನು ಕಡ್ಡಾಯವಾಗಿ ಒದಗಿಸುವಂತೆ ಯಾವುದೇ ಕಚೇರಿಗೆ ತಾಕೀತು ಮಾಡುವುದು;

(ಇ) ಸಾಕ್ಷಿದಾರರನ್ನು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸಲು ಕಾರ್ಯಾಜ್ಞೆಗಳನ್ನು ಹೊರಡಿಸುವುದು;

(ಎಫ್) ತನ್ನ ತೀರ್ಮಾನಗಳನ್ನು ಪುನರವಲೋಕಿಸುವುದು;

(ಜಿ) ಹಾಜರಾಗಲು ತಪ್ಪಿದ್ದಕ್ಕಾಗಿ ಅರ್ಜಿಯನ್ನು ವಜಾಮಾಡುವುದು ಅಥವಾ ಅದನ್ನು ಏಕಪಕ್ಷೀಯವಾಗಿ ತೀರ್ಮಾನಿಸುವುದು;

(ಹೆಚ್) ಹಾಜರಾಗಲು ತಪ್ಪಿದ್ದಕ್ಕಾಗಿ, ಯಾವುದೇ ಅರ್ಜಿಯನ್ನು ವಜಾ ಮಾಡಿರುವ ಯಾವುದೇ ಆದೇಶವನ್ನು ಅಥವಾ ಏಕಪಕ್ಷೀಯವಾಗಿ ತಾನು ಮಾಡಿದ ಯಾವುದೇ ಆದೇಶವನ್ನು ರದ್ದುಪಡಿಸುವುದು;

(ಐ) ಈ ಅಧಿನಿಯಮದ ಮೇರೆಗೆ ಯಾವುದೇ ಅರ್ಜಿಯನ್ನು ಸಲ್ಲಿಸಿದಾಗ ಅಥವಾ ಯಾವುದೇ ಅಪೀಲನ್ನು ದಾಖಲು ಮಾಡಿದ ಮೇಲೆ ಸಂಬಂಧಪಟ್ಟ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ ಮಧ್ಯಂತರ ಆದೇಶವನ್ನು (ನಿರ್ಬಂಧಕಾಜ್ಞೆ ಅಥವಾ ತಡೆಯಾಜ್ಞೆ ಸೇರಿದಂತೆ ಮಂಜೂರು ಮಾಡುವುದು) ಹೊರಡಿಸುವುದು;

(ಜೆ) ಅನುಸೂಚಿ–Iರಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಅಧಿನಿಯಮಿತಿಯ ಯಾವುದೇ ಉಲ್ಲಂಘನೆ ಮಾಡದಂತೆ ಅಥವಾ ಮಾಡಿಸದಂತೆ ಯಾರೇ ವ್ಯಕ್ತಿಯನ್ನು ಅಗತ್ಯಪಡಿಸುವ ಆದೇಶವನ್ನು ಹೊರಡಿಸುವುದು;

(ಕೆ) ಯಾವ ವಿಷಯವನ್ನು ನಿಯಮಿಸಬಹುದಾಗಿದೆಯೋ ಆ ಯಾವುದೇ ಇತರ ವಿಷಯ

– ಈ ವಿಷಯಗಳಿಗೆ ಸಂಬಂಧಪಟ್ಟಂತೆ ದಾವೆಯ ಅಧಿವಿಚಾರಣೆ ನಡೆಸುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತಗೊಂಡಿರುವ ಅಧಿಕಾರಗಳನ್ನೇ ನ್ಯಾಯಾಧಿಕರಣವು ಹೊಂದಿರತಕ್ಕದ್ದು.

(5) ನ್ಯಾಯಾಧಿಕರಣದ ಮುಂದಿರುವ ಎಲ್ಲಾ ವ್ಯವಹರಣೆಗಳನ್ನು, ಭಾರತ ದಂಡ ಸಂಹಿತೆ (1860ರ 45)ಯ ಪ್ರಕರಣ 196ರ ಉದ್ದೇಶಗಳಿಗಾಗಿ, ಪ್ರಕರಣ 193, 219 ಮತ್ತು 228ರ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಗಳೆಂದು ಭಾವಿಸತಕ್ಕದ್ದು ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಪ್ರಕರಣ 195ರ ಮತ್ತು ಅಧ್ಯಾಯ–XXVIರ ಉದ್ದೇಶಗಳಿಗಾಗಿ ನ್ಯಾಯಾಧಿಕರಣವನ್ನು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**20. ನ್ಯಾಯಾಧಿಕರಣವು ಕೆಲವೊಂದು ತತ್ವಗಳನ್ನು ಅನ್ವಯಿಸುವುದು.–** ನ್ಯಾಯಾಧಿಕರಣವು, ಯಾವುದೇ ಆದೇಶವನ್ನು ಮಾಡುವಾಗ ಅಥವಾ ತೀರ್ಮಾನವನ್ನು ಕೈಗೊಳ್ಳುವಾಗ ಅಥವಾ ಐತೀರ್ಪನ್ನು ಹೊರಡಿಸುವಾಗ, ನಿರಂತರ ಬೆಳವಣಿಗೆಯ ತತ್ವಗಳನ್ನು, ಮುನ್ನೆಚ್ಚರಿಕೆ ತತ್ವವನ್ನು ಮತ್ತು ಮಾಲಿನ್ಯ ಉಂಟುಮಾಡುವ ವ್ಯಕ್ತಿಯು/ಸಂಸ್ಥೆಯು ನಷ್ಟಭರ್ತಿ ಮಾಡಬೇಕೆಂಬ ತತ್ವವನ್ನು ಅನ್ವಯಿಸತಕ್ಕದ್ದು.

**21. ಬಹುಮತದ ಮೂಲಕ ತೀರ್ಮಾನವನ್ನು ಕೈಗೊಳ್ಳುವುದು.–** ಸದಸ್ಯರ ಬಹುಮತದ ಮೂಲಕ ನ್ಯಾಯಾಧಿಕರಣವು ತೆಗೆದುಕೊಂಡ ತೀರ್ಮಾನಕ್ಕೆ ಬದ್ಧವಾಗಿರತಕ್ಕದ್ದು:

ಪರಂತು, ಅರ್ಜಿಯನ್ನು ಅಥವಾ ಅಪೀಲನ್ನು ವಿಚಾರಣೆ ಮಾಡುತ್ತಿರುವ ಸದಸ್ಯರ ನಡುವೆ ಭಿನ್ನಾಭಿಪ್ರಾಯ ಉಂಟಾದರೆ ಮತ್ತು ಭಿನ್ನಾಭಿಪ್ರಾಯಕ್ಕೆ ಬಂದ ಸದಸ್ಯರ ಸಂಖ್ಯೆ ಸಮ ಸಮ ಇದ್ದರೆ, ಅಧ್ಯಕ್ಷನು, (ಅವನು ಈ ಮೊದಲು ಅಂಥ ಅರ್ಜಿಯ ಅಥವಾ ಅಪೀಲಿನ ವಿಚಾರಣೆ ಮಾಡಿರದಿದ್ದರೆ) ಅಂಥ ಅರ್ಜಿಯನ್ನು ಅಥವಾ ಅಪೀಲನ್ನು ವಿಚಾರಣೆ ಮಾಡತಕ್ಕದ್ದು ಮತ್ತು ತೀರ್ಮಾನಿಸತಕ್ಕದ್ದು:

ಮತ್ತು ಪರಂತು, ಅಧ್ಯಕ್ಷನು ತಾನೇ ಸ್ವತಃ ಅಥವಾ ನ್ಯಾಯಾಧಿಕರಣದ ಇತರೆ ಸದಸ್ಯರೊಂದಿಗೆ ಅಂಥ ಅರ್ಜಿಯ ಅಥವಾ ಅಪೀಲಿನ ವಿಚಾರಣೆ ನಡೆಸಿದರೆ ಅಂಥ ಸಂದರ್ಭಗಳಲ್ಲಿ ಸಹ ಸದಸ್ಯರ ನಡುವೆ ಭಿನ್ನಾಭಿಪ್ರಾಯ ಉಂಟಾದರೆ ಮತ್ತು ಭಿನ್ನಾಭಿಪ್ರಾಯಕ್ಕೆ ಬಂದ ಸದಸ್ಯರ ಸಂಖ್ಯೆ ಸಮಸಮ ಇದ್ದರೆ ಅವನು, ನ್ಯಾಯಾಧಿಕರಣದ ಇತರೇ ಸದಸ್ಯರಿಗೆ ವಿಷಯವನ್ನು ಒಪ್ಪಿಸತಕ್ಕದ್ದು. ಆ ಸದಸ್ಯರುಗಳು ಅಂಥ ಅರ್ಜಿಯ ಅಥವಾ ಅಪೀಲಿನ ವಿಚಾರಣೆ ನಡೆಸತಕ್ಕದ್ದು ಮತ್ತು ತೀರ್ಮಾನಿಸತಕ್ಕದ್ದು.

**22. ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು.–** ನ್ಯಾಯಾಧಿಕರಣದ ಯಾವುದೇ ಐತೀರ್ಪಿನಿಂದ, ತೀರ್ಮಾನದಿಂದ ಅಥವಾ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅವನಿಗೆ ನ್ಯಾಯಾಧಿಕರಣದ ಐತೀರ್ಪು, ತೀರ್ಮಾನ ಅಥವಾ ಆದೇಶ ತಲುಪಿದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಪ್ರಕರಣ 100ರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಒಂದು ಆಧಾರದ ಮೇಲೆ ಅಥವಾ ಹೆಚ್ಚು ಆಧಾರಗಳ ಮೇಲೆ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಬಹುದು:

ಪರಂತು, ಸಾಕಷ್ಟು ಕಾರಣದಿಂದಾಗಿ ಅಪೀಲುದಾರನು ಅಪೀಲನ್ನು ಸಲ್ಲಿಸಲು ಆಗಲಿಲ್ಲವೆಂಬುದು ಸರ್ವೋಚ್ಚ ನ್ಯಾಯಾಲಯಕ್ಕೆ ಮನವರಿಕೆಯಾದರೆ ತೊಂಬತ್ತು ದಿನಗಳಾದ ಮೇಲೆಯೂ ಅವನು ಸಲ್ಲಿಸಿದ ಯಾವುದೇ ಅಪೀಲನ್ನು ಅದು ಪುರಸ್ಕರಿಸಬಹುದು.

**23. ವೆಚ್ಚ.–** (1) ಈ ಅಧಿನಿಯಮದ ಮೇರೆಗೆ ಅರ್ಜಿಯನ್ನು ಅಥವಾ ಅಪೀಲನ್ನು ವಿಲೆ ಮಾಡುವಾಗ, ನ್ಯಾಯಾಧಿಕರಣವು, ವೆಚ್ಚಗಳ ಬಗ್ಗೆ ಆದೇಶವನ್ನು ಮಾಡುವುದು ಅವಶ್ಯ ಎಂದು ತಾನು ಪರಿಗಣಿಸಿದರೆ ಆ ಬಗ್ಗೆ ಆದೇಶವನ್ನು ಮಾಡಲು ಅಧಿಕಾರವನ್ನು ಹೊಂದಿರತಕ್ಕದ್ದು.

(2) ನ್ಯಾಯಾಧಿಕರಣವು, ಕ್ಲೇಮನ್ನು, ಅಂಗೀಕಾರವಾದುದಲ್ಲವೆಂದು ಅಥವಾ ಅದು ಸುಳ್ಳು ಕ್ಲೇಮೆಂದು ಅಥವಾ ಕಿರುಕುಳಕಾರಿಯಾದುದಾಗಿದೆಯೆಂದು ತೀರ್ಮಾನಿಸಿದ್ದರೆ, ಅಂಥ ಕ್ಲೇಮನ್ನು ಇಡಿಯಾಗಿ ಅಥವಾ ಭಾಗಶಃ ತಳ್ಳಿಹಾಕಿದ್ದರೆ ನ್ಯಾಯಾಧಿಕರಣವು ಅಂಥ ಕ್ಲೇಮನ್ನು ಅದು ಸುಳ್ಳು ಕ್ಲೇಮೆಂದು ಅಥವಾ ಕಿರುಕುಳಕಾರಿಯಾದುದಾಗಿದೆಯೆಂದು ತೀರ್ಮಾನಿಸುವುದಕ್ಕೆ ತನಗೆ ಇದ್ದ ಕಾರಣಗಳನ್ನು ದಾಖಲಿಸಿದ ತರುವಾಯ, ಸೂಕ್ತವೆಂದು ತಾನು ಭಾವಿಸಿದರೆ, ಯಾವುದೇ ಮಧ್ಯಂತರ ನಿರ್ಬಂಧಕಾಜ್ಞೆಯಿಂದಾಗಿ ಕಳೆದುಕೊಂಡ ಪ್ರಯೋಜನಗಳೂ ಸೇರಿದಂತೆ ಖರ್ಚುಗಳ ನೀಡಿಕೆಗೆ ಆದೇಶ ಹೊರಡಿಸಬಹುದು.

**24. ಪರಿಸರಕ್ಕೆ ಆದ ಹಾನಿಗಾಗಿ ಸಂದಾಯ ಮಾಡಬಹುದಾದ ಮೊಬಲಗನ್ನು ಠೇವಣಿ ಇಡುವುದು.–** (1) ಪರಿಸರಕ್ಕೆ ಯಾವುದೇ ಹಾನಿ ಆಗಿರುವುದರ ಆಧಾರದ ಮೇಲೆ ನ್ಯಾಯಾಧಿಕರಣವು ನೀಡಿದ ಯಾವುದೇ ಐತೀರ್ಪಿನ ಅಥವಾ ಆದೇಶದ ಮೇರೆಗೆ ನಷ್ಟಪರಿಹಾರದ ಅಥವಾ ಪರಿಹಾರದ ರೂಪದಲ್ಲಿ ಯಾವುದೇ ಮೊಬಲಗನ್ನು ಸಂದಾಯ ಮಾಡುವಂತೆ ನ್ಯಾಯಾಧಿಕರಣವು ಆದೇಶ ಮಾಡಿದ್ದರೆ ಆ ಮೊಬಲಗನ್ನು, ಸಾರ್ವಜನಿಕ ಹೊಣೆಗಾರಿಕೆ ವಿಮಾ ಅಧಿನಿಯಮ, 1991 (1991ರ 6)ರ ಪ್ರಕರಣ 7ಎ ನ ಮೇರೆಗೆ ಸ್ಥಾಪಿತವಾದ ಪರಿಹಾರ ನಿಧಿಗೆ ಜಮೆ ಮಾಡುವುದಕ್ಕಾಗಿ ಆ ಪ್ರಕರಣದ ಉಪಪ್ರಕರಣ (3)ರಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರಕ್ಕೆ ಆ ಮೊಬಲಗನ್ನು ಕಟ್ಟತಕ್ಕದ್ದು:

(2) ಉಪಪ್ರಕರಣ (1)ರ ಮೇರೆಗೆ ಪರಿಸರ ಪರಿಹಾರ ನಿಧಿಗೆ ಜಮೆ ಮಾಡಿದ ನಷ್ಟಪರಿಹಾರದ ಅಥವಾ ಪರಿಹಾರದ ಮೊಬಲಗನ್ನು, ಸಾರ್ವಜನಿಕ ಹೊಣೆಗಾರಿಕೆ ವಿಮಾ ಅಧಿನಿಯಮ, 1991 (1991ರ 6)ರಲ್ಲಿ ಏನೇ ಒಳಗೊಂಡಿದ್ದರೂ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಪರಿಸರಕ್ಕೆ ಸಂಬಂಧಿಸಿದಂಥ ಉದ್ದೇಶಗಳಿಗಾಗಿ ಅಂಥ ವ್ಯಕ್ತಿಗಳು ಅಥವಾ ಪ್ರಾಧಿಕಾರವು ಬಳಸಿಕೊಳ್ಳಬಹುದು.

**25. ನ್ಯಾಯಾಧಿಕರಣದ ಐತೀರ್ಪನ್ನು ಅಥವಾ ಆದೇಶವನ್ನು ಅಥವಾ ತೀರ್ಮಾನವನ್ನು ಅಮಲ್ಜಾರಿಗೊಳಿಸುವುದು.–** (1) ಈ ಅಧಿನಿಯಮದ ಮೇರೆಗೆ, ನ್ಯಾಯಾಧಿಕರಣದ ಐತೀರ್ಪು ಅಥವಾ ಆದೇಶವು ಅಥವಾ

ತೀರ್ಮಾನವು ಸಿವಿಲ್ ನ್ಯಾಯಾಲಯದ ಡಿಕ್ರಿಯಂತೆಯೇ ನ್ಯಾಯಾಧಿಕರಣವು ಅಮಲ್ಜಾರಿಗೊಳಿಸುವಂಥದ್ದಾಗಿರತಕ್ಕದ್ದು ಮತ್ತು ಈ ಉದ್ದೇಶಗಳಿಗಾಗಿ, ನ್ಯಾಯಾಧಿಕರಣವು ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ ನ್ಯಾಯಾಧಿಕರಣವು, ತಾನು ಹೊರಡಿಸಿದ ಯಾವುದೇ ಆದೇಶವನ್ನು ಅಥವಾ ನೀಡಿದ ಐತೀರ್ಪನ್ನು ಸ್ಥಳೀಯ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಸಿವಿಲ್ ನ್ಯಾಯಾಲಯಕ್ಕೆ ಕಳುಹಿಸಬಹುದು ಮತ್ತು ಅಂಥ ಸಿವಿಲ್ ನ್ಯಾಯಾಲಯವು ಅದು, ತಾನೇ ಹೊರಡಿಸಿದ ಡಿಕ್ರಿಯಾಗಿದ್ದಿದ್ದರೆ ಅದನ್ನು ಹೇಗೆ ಅಮಲ್ಜಾರಿಗೊಳಿಸುತ್ತಿತ್ತೋ ಹಾಗೆಯೇ ಆ ಆದೇಶವನ್ನು ಅಥವಾ ಐತೀರ್ಪನ್ನು ಅಮಲ್ಜಾರಿಗೊಳಿಸತಕ್ಕದ್ದು.

(3) ಯಾರೇ ವ್ಯಕ್ತಿಯ ಮರಣಕ್ಕೆ ಅಥವಾ ಕ್ಷತಿಗೆ ಅಥವಾ ಯಾವುದೇ ಸ್ವತ್ತಿಗೆ ಮತ್ತು ಪರಿಸರಕ್ಕೆ ಆದ ಹಾನಿಗೆ ಯಾರೇ ವ್ಯಕ್ತಿಯು, ಹೊಣೆಗಾರನಾಗಿದ್ದರೆ, ಅವನ ವಿರುದ್ಧ ನ್ಯಾಯಾಧಿಕರಣವು ಐತೀರ್ಪನ್ನು ನೀಡಿದ್ದರೆ ಅಥವಾ ಆದೇಶವನ್ನು ಹೊರಡಿಸಿದ್ದರೆ, ನ್ಯಾಯಾಧಿಕರಣವು ನಿರ್ದೇಶಿಸಿದ ಮೊಬಲಗನ್ನು ಆ ಐತೀರ್ಪಿನಲ್ಲಿ ಅಥವಾ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸಂದಾಯ ಮಾಡಲು ಅಥವಾ ಠೇವಣಿ ಮಾಡಲು ಅವನು ವಿಫಲನಾಗಿದ್ದರೆ, ಅಂಥ ಮೊಬಲಗನ್ನು ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನ ಮೇರೆಗಿನ ಅಪರಾಧಕ್ಕಾಗಿ ಪ್ರಾಸಿಕ್ಯೂಷನ್‌ಗೆ ದೂರನ್ನು ಸಲ್ಲಿಸುವುದಕ್ಕೆ ಬಾಧಕವಾಗದಂತೆ ಭೂ ಕಂದಾಯದ ಬಾಕಿಯಂತೆ ಅಥವಾ ಸಾರ್ವಜನಿಕ ತಗಾದೆ ಬಾಕಿಯಂತೆ, ಆ ಹಣವನ್ನು ಸದರಿ ವ್ಯಕ್ತಿಯಿಂದ ವಸೂಲು ಮಾಡತಕ್ಕದ್ದು.

## ಅಧ್ಯಾಯ IV

## ದಂಡನೆ

**26. ನ್ಯಾಯಾಧಿಕರಣದ ಆದೇಶಗಳನ್ನು ಪಾಲಿಸಲು ವಿಫಲವಾದುದಕ್ಕೆ ದಂಡನೆ.–** (1) ಯಾರಾದರೂ ಈ ಅಧಿನಿಯಮದ ಮೇರೆಗೆ ನ್ಯಾಯಾಧಿಕರಣದ ಯಾವುದೇ ಆದೇಶವನ್ನು ಅಥವಾ ಐತೀರ್ಪನ್ನು ಅಥವಾ ತೀರ್ಮಾನವನ್ನು ಪಾಲಿಸಲು ವಿಫಲನಾದರೆ, ಅವನು, ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಶಿಕ್ಷೆಯಿಂದ ಅಥವಾ ಹತ್ತು ಕೋಟಿ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡನೆಗೆ ಗುರಿಯಾಗತಕ್ಕದ್ದು ಮತ್ತು ವಿಫಲತೆಯು ಅಥವಾ ಉಲ್ಲಂಘನೆಯು ಮುಂದುವರೆದ ಸಂದರ್ಭದಲ್ಲಿ, ಮೊದಲನೇ ವಿಫಲತೆಗಾಗಿ ಅಥವಾ ಉಲ್ಲಂಘನೆಗಾಗಿ ಅಪರಾಧ ನಿರ್ಣಯವಾದ ತರುವಾಯ ಅಂಥ ವಿಫಲತೆಯು ಅಥವಾ ಉಲ್ಲಂಘನೆಯು ಮುಂದುವರೆದ ಅವಧಿಯಲ್ಲಿ ಪ್ರತಿಯೊಂದು ದಿನಕ್ಕೆ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಕಂಪನಿಯು, ಈ ಅಧಿನಿಯಮದ ಮೇರೆಗೆ ನ್ಯಾಯಾಧಿಕರಣವು ಮಾಡಿದ ಯಾವುದೇ ಆದೇಶವನ್ನು ಅಥವಾ ನೀಡಿದ ಐತೀರ್ಪನ್ನು ಅಥವಾ ತೀರ್ಮಾನವನ್ನು ಪಾಲಿಸಲು ವಿಫಲವಾದ ಸಂದರ್ಭದಲ್ಲಿ, ಅಂಥ ಕಂಪನಿಯು, ಇಪ್ಪತ್ತೈದು ಕೋಟಿ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ವಿಫಲತೆಯು ಅಥವಾ ಉಲ್ಲಂಘನೆಯು ಮುಂದುವರೆದ ಸಂದರ್ಭದಲ್ಲಿ ಮೊದಲನೇ ವಿಫಲತೆಗಾಗಿ ಅಥವಾ ಉಲ್ಲಂಘನೆಗಾಗಿ ಅಪರಾಧ ನಿರ್ಣಯವಾದ ತರುವಾಯ ಅಂಥ ವಿಫಲತೆಯು ಅಥವಾ ಉಲ್ಲಂಘನೆಯು ಮುಂದುವರೆದ ಅವಧಿಯಲ್ಲಿ ಪ್ರತಿಯೊಂದು ದಿನಕ್ಕೆ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ದಂಡನೆಗೆ ಗುರಿಯಾಗತಕ್ಕದ್ದು.

(2) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅಪರಾಧವನ್ನು ಸದರಿ ಸಂಹಿತೆಯ ಅರ್ಥವ್ಯಾಪ್ತಿಯೊಳಗೆ ಸಂಜ್ಞಾನಕ್ಕೆ ತೆಗೆದುಕೊಳ್ಳುವಂಥದ್ದಲ್ಲವೆಂದು ಭಾವಿಸತಕ್ಕದ್ದು.

**27. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಕಂಪನಿಯು ಎಸಗಿದ್ದರೆ, ಅಪರಾಧ ಎಸಗಿದ ಕಾಲದಲ್ಲಿ ನೇರವಾಗಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ಆ ವ್ಯಕ್ತಿಯು ಮತ್ತು ಕಂಪನಿಯು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಒಳಗಾಗತಕ್ಕದ್ದು:

ಪರಂತು, ಅಂಥ ವ್ಯಕ್ತಿಯು ಆ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತ್ತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಯಲು ತಾನು ಯಥೋಚಿತವಾದ ಎಲ್ಲಾ ಎಚ್ಚರಿಕೆಯನ್ನು ವಹಿಸಿದ್ದೆನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ ಅಂಥ ಯಾರೇ ವ್ಯಕ್ತಿಯನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿರುವ ಯಾವುದೇ ಶಿಕ್ಷೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಎಸಗಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಕಂಪನಿಯ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿ(ತ್ತೆ)ತೆಂದು ಅಥವಾ ಅವನ ನಿರ್ಲಕ್ಷ್ಯತೆ ಕಾರಣದಿಂದ ನಡೆಯಿ(ತ್ತೆ)ತೆಂದು ಆರೋಪಿಸಿರುವುದು ರುಜುವಾತಾದರೆ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಒಳಗಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ, "ನಿರ್ದೇಶಕ" ಎಂದರೆ, ಫರ್ಮಿನ ಪಾಲುದಾರ.

**28. ಸರ್ಕಾರಿ ಇಲಾಖೆಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ನ್ಯಾಯಾಧಿಕರಣದ ಯಾವುದೇ ಆದೇಶವನ್ನು ಅಥವಾ ಐತೀರ್ಪನ್ನು ಅಥವಾ ತೀರ್ಮಾನವನ್ನು ಪಾಲಿಸಲು ಸರ್ಕಾರದ ಯವುದೇ ಇಲಾಖೆಯು ವಿಫಲವಾದಲ್ಲಿ ಆ ಇಲಾಖೆಯ ಮುಖ್ಯಸ್ಥನನ್ನು ಅಂಥ ವೈಫಲ್ಯದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಎಸಗಿರುವುದಕ್ಕಾಗಿ ಅವನ ವಿರುದ್ಧದ ವ್ಯವಹರಣೆಗಳಿಗೆ ಅವನು ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಒಳಗಾಗತಕ್ಕದ್ದು:

ಪರಂತು, ಆ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತ್ತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಯಲು ತಾನು ಯಥೋಚಿತವಾದ ಎಲ್ಲಾ ಎಚ್ಚರಿಕೆಯನ್ನು ವಹಿಸಿದ್ದೆನೆಂದು ಅಂಥ ಇಲಾಖೆಯ ಮುಖ್ಯಸ್ಥನು ರುಜುವಾತುಪಡಿಸಿದರೆ ಈ ಪ್ರಕರಣದಲ್ಲಿರುವುದು ಯಾವುದೂ, ಅವನನ್ನು ಯಾವುದೇ ಶಿಕ್ಷೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಸರ್ಕಾರದ ಇಲಾಖೆಯು ಎಸಗಿರುವಲ್ಲಿ ಮತ್ತು ಆ ಅಪರಾಧವನ್ನು ಇಲಾಖೆಯ ಮುಖ್ಯಸ್ಥ ಅಲ್ಲದ ಯಾರೇ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಎಸಗಲಾಗಿದೆಯೆಂದು ಅಥವಾ ಅವನ ಯಾವುದೇ ನಿರ್ಲಕ್ಷ್ಯದಿಂದ ನಡೆಯುತ್ತದೆಂದು ಆರೋಪಿಸಿರುವುದು ರುಜುವಾತಾದರೆ ಅಂಥ ಅಧಿಕಾರಿಯನ್ನು ಸಹ ಆ ಆರೋಪದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಒಳಗಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಗುರಿಯಾಗತಕ್ಕದ್ದು.

## ಅಧ್ಯಾಯ V

### ಸಂಕೀರ್ಣ

**29. ಅಧಿಕಾರವ್ಯಾಪ್ತಿಗೆ ಪ್ರತಿಷೇಧ.–** (1) ಈ ಅಧಿನಿಯಮದ ಮೇರೆಗೆ ನ್ಯಾಯಾಧಿಕರಣವನ್ನು ಸ್ಥಾಪಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ನ್ಯಾಯಾಧಿಕರಣವು ಯಾವ ವಿಷಯವನ್ನು ತನ್ನ ಅಪೀಲು ವಿಚಾರಣಾ ಅಧಿಕಾರವ್ಯಾಪ್ತಿಯ ಮೇರೆಗೆ ನಿರ್ಧರಿಸಲು ಅಧಿಕಾರ ಹೊಂದಿದೆಯೋ ಆ ಯಾವುದೇ ವಿಷಯದ ಸಂಬಂಧದಲ್ಲಿ ಯಾವುದೇ ಅಪೀಲನ್ನು ಪುರಸ್ಕರಿಸಲು ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

(2) ನ್ಯಾಯಾಧಿಕರಣವು ಯಾವ ವಿವಾದದ ಬಗ್ಗೆ ಅಥವಾ ಪರಿಹಾರದ ಅಥವಾ ನಷ್ಟಪರಿಹಾರದ ಮಂಜೂರಾತಿಗೆ ಅಥವಾ ಹಾನಿಗೊಂಡ ಸ್ವತ್ತನ್ನು ಅಥವಾ ಹಾನಿಗೊಂಡ ಪರಿಸರವನ್ನು ಪೂರ್ವಸ್ಥಿತಿಗೆ ತರುವುದಕ್ಕೆ ಸಂಬಂಧಿಸಿದ ಯಾವ ಕ್ಲೇಮಿನ ಬಗ್ಗೆ ನ್ಯಾಯ ನಿರ್ಣಯ ಮಾಡಬಹುದೋ ಆ ವಿವಾದವನ್ನು ಇತ್ಯರ್ಥಪಡಿಸುವುದಕ್ಕೆ ಅಥವಾ ಆ ಕ್ಲೇಮಿಗೆ ಸಂಬಂಧಿಸಿದ ಯಾವುದೇ ವಿಷಯವನ್ನು ಪುರಸ್ಕರಿಸಲು ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ ಮತ್ತು ಅಂಥ ವಿವಾದವನ್ನು ಅಥವಾ ಯಾವುದೇ ಪರಿಹಾರವನ್ನು ಅಥವಾ ನಷ್ಟಪರಿಹಾರವನ್ನು ಮಂಜೂರು ಮಾಡುವುದಕ್ಕೆ ಅಥವಾ ಹಾನಿಗೊಂಡ ಸ್ವತ್ತನ್ನು ಅಥವಾ ಹಾನಿಗೊಂಡ ಪರಿಸರವನ್ನು ಪೂರ್ವಸ್ಥಿತಿಗೆ ತರುವುದಕ್ಕೆ ಸಂಬಂಧಪಟ್ಟ ಯಾವುದೇ ಕ್ಲೇಮನ್ನು ಇತ್ಯರ್ಥಪಡಿಸುವ ಸಂಬಂಧದಲ್ಲಿ ನ್ಯಾಯಾಲಯವು ಅಥವಾ ಅದರ ಮುಂದೆ ತೆಗೆದುಕೊಂಡ ಅಥವಾ ತೆಗೆದುಕೊಳ್ಳುವಂಥ ಯಾವುದೇ ಕ್ರಮದ ಸಂಬಂಧದಲ್ಲಿ ಯಾವುದೇ ನಿರ್ಬಂಧಕಾಜ್ಞೆಯನ್ನು ಸಿವಿಲ್ ನ್ಯಾಯಾಲಯವು ಹೊರಡಿಸತಕ್ಕದ್ದಲ್ಲ.

**30. ಅಪರಾಧಗಳ ಸಂಜ್ಞಾನ.–** (1) ಯಾವುದೇ ನ್ಯಾಯಾಲಯವು,–

(ಎ) ಕೇಂದ್ರ ಸರ್ಕಾರವು ಅಥವಾ ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಕೃತಗೊಳಿಸಿದ ಯಾವುದೇ ಪ್ರಾಧಿಕಾರವು ಅಥವಾ ಅಧಿಕಾರಿಯು; ಅಥವಾ

(ಬಿ) ಆರೋಪಿಸಿರುವ ಅಪರಾಧದ ಬಗ್ಗೆ ಮತ್ತು ದೂರನ್ನು ನೀಡುವ ತನ್ನ ಉದ್ದೇಶದ ಬಗ್ಗೆ ಯಾವ ವ್ಯಕ್ತಿಯು, ಕೇಂದ್ರ ಸರ್ಕಾರಕ್ಕೆ ಅಥವಾ ಈ ಹಿಂದೆ ಹೇಳಿದಂತೆ ಅಧಿಕೃತಗೊಂಡ ಪ್ರಾಧಿಕಾರಕ್ಕೆ ಅಥವಾ ಅಧಿಕಾರಿಗೆ

ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಅರವತ್ತು ದಿನಗಳಿಗೆ ಕಡಿಮೆಯಿರದಂತೆ ನೋಟೀಸನ್ನು ನೀಡಿರುವನೋ ಆ ಯಾರೇ ವ್ಯಕ್ತಿಯು

– ನೀಡಿದ ದೂರಿನ ಮೇಲೆ ಹೊರತು, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

2) ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್‌ನ ಅಥವಾ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್‌ನ ನ್ಯಾಯಾಲಯಕ್ಕಿಂತ ಕೆಳದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ಶಿಕ್ಷಾರ್ಹವಾದ ಯಾವುದೇ ಅಪರಾಧದ ಅಧಿವಿಚಾರಣೆ ಮಾಡತಕ್ಕದ್ದಲ್ಲ.

**31. ನ್ಯಾಯಾಧಿಕರಣದ ಸದಸ್ಯರನ್ನು ಮತ್ತು ಸಿಬ್ಬಂದಿಯನ್ನು ಲೋಕ ನೌಕರರೆಂದು ಭಾವಿಸುವುದು.–** ನ್ಯಾಯಾಧಿಕರಣದ ಅಧ್ಯಕ್ಷನನ್ನು, ನ್ಯಾಯಿಕ ಮತ್ತು ತಜ್ಞ ಸದಸ್ಯರುಗಳನ್ನು, ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ಭಾರತ ದಂಡ ಸಂಹಿತೆ (1860ರ 45)ಯ ಪ್ರಕರಣ 21ರ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

**32. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಮಾಡಿದ ಯಾವುದೇ ಆದೇಶದ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಯಾವುದೇ ಶಾಸನಬದ್ಧ ಪ್ರಾಧಿಕಾರದ ನೌಕರರ ವಿರುದ್ಧ, ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

(2) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಮಾಡಿದ ಯಾವುದೇ ಆದೇಶದ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ನ್ಯಾಯಾಧಿಕರಣದ ಅಧ್ಯಕ್ಷನ ಅಥವಾ ನ್ಯಾಯಿಕ ಸದಸ್ಯನ ಅಥವಾ ತಜ್ಞ ಸದಸ್ಯನ ಅಥವಾ ಅಧ್ಯಕ್ಷನು ಅಥವಾ ನ್ಯಾಯಿಕ ಸದಸ್ಯನು ಅಥವಾ ತಜ್ಞ ಸದಸ್ಯನು ಅಧಿಕೃತಗೊಳಿಸಿದ ಇತರ ಯಾರೇ ವ್ಯಕ್ತಿಯ ವಿರುದ್ಧ, ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರಕ್ಕದ್ದಲ್ಲ.

**33. ಅಧಿನಿಯಮವು ಅಧ್ಯಾರೋಹಿ ಪರಿಣಾಮವನ್ನು ಹೊಂದಿರುವುದು.–** ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಅಥವಾ ಈ ಅಧಿನಿಯಮವನ್ನು ಹೊರತುಪಡಿಸಿ ಇತರೆ ಯಾವುದೇ ಕಾನೂನಿನ ಬಲದಿಂದ ಪರಿಣಾಮ ಹೊಂದಿರುವ ಯಾವುದೇ ಲಿಖಿತದಲ್ಲಿ ಅಸಂಗತವಾದುದು ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಉಪಬಂಧಗಳು ಪರಿಣಾಮಕಾರಿಯಾದವುಗಳಾಗಿರತಕ್ಕದ್ದು.

**34. ಅನುಸೂಚಿ I ಅನ್ನು ತಿದ್ದುಪಡಿ ಮಾಡಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಅನುಸೂಚಿ I ಅನ್ನು, ಪರಿಸರ ರಕ್ಷಣೆಯ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಸಂಸತ್ತು ಅಧಿನಿಯಮಿಸಿದ ಇತರೆ ಯಾವುದೇ ಅಧಿನಿಯಮವನ್ನು ಅದರಲ್ಲಿ ಸೇರಿಸಿ ಅಥವಾ ಅದರಲ್ಲಿ ಈಗಾಗಲೇ ನಿರ್ದಿಷ್ಟಪಡಿಸಿರುವ ಯಾವುದೇ ಅಧಿನಿಯಮವನ್ನು ಅದರಿಂದ ಬಿಟ್ಟುಬಿಟ್ಟು ತಿದ್ದುಪಡಿ ಮಾಡಬಹುದು ಮತ್ತು

ಅಂಥ ಅಧಿಸೂಚನೆಯ ಪ್ರಕಟಣೆಯ ದಿನಾಂಕದಂದು, ಅಂಥ ಅಧಿನಿಯಮವನ್ನು ಅನುಸೂಚಿ Iರಲ್ಲಿ ಸೇರಿಸಲಾಗಿದೆ ಎಂದು ಅಥವಾ ಸಂದರ್ಭಾನುಸಾರ ಅದನ್ನು ಅನುಸೂಚಿ I ರಿಂದ ಬಿಟ್ಟುಬಿಡಲಾಗಿದೆಯೆಂದು ಭಾವಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಹೊರಡಿಸಲು ಪ್ರಸ್ತಾವಿಸಿರುವ ಪ್ರತಿಯೊಂದು ಅಧಿಸೂಚನೆಯ ಪ್ರತಿಯನ್ನು ಕರಡು ರೂಪದಲ್ಲಿ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಈ ಹಿಂದೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಅನುಮೋದಿಸದಿರಲು ಉಭಯ ಸದನಗಳು ಒಪ್ಪಿದರೆ ಅಥವಾ ಆ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಡನ್ನು ಮಾಡಲು ಎರಡು ಸದನಗಳು ಒಪ್ಪಿದರೆ, ಆ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ ಅಥವಾ ಸಂದರ್ಭಾನುಸಾರ ಉಭಯ ಸದನಗಳು ಅಂಗೀಕರಿಸಬಹುದಾದಂಥ ಮಾರ್ಪಾಟು ಮಾಡಿದ ರೂಪದಲ್ಲಿ ಮಾತ್ರ ಹೊರಡಿಸತಕ್ಕದ್ದು.

**35. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಪ್ರಕರಣ 4ರ ಉಪಪ್ರಕರಣ (4)ರ (ಎ) ಖಂಡದ ಮೇರೆಗೆ ನ್ಯಾಯಾಧಿಕರಣದ ಮುಂದೆ ಹಾಜರಾಗಲು ಯಾವ ವ್ಯಕ್ತಿಗಳು ಹಕ್ಕುಳ್ಳವರಾಗಿರುವರೋ ಆ ವ್ಯಕ್ತಿಗಳಿಗೆ ಸಂಬಂಧಿಸಿದ ನಿಯಮಗಳು;

(ಬಿ) ಪ್ರಕರಣ 4ರ ಉಪಪ್ರಕರಣ (4)ರ (ಬಿ) ಖಂಡದ ಮೇರೆಗೆ ಅರ್ಜಿಗಳ ಮತ್ತು ಅಪೀಲುಗಳ ಹಾಗೂ ಅರ್ಜಿಗಳಿಗೆ ಮತ್ತು ಅಪೀಲುಗಳಿಗೆ ಸಂಬಂಧಿಸಿದ ಹಾಗೂ ಇತರ ವಿಷಯಗಳ ವಿಚಾರಣೆಗೆ ಕಾರ್ಯವಿಧಾನ;

(ಸಿ) ಪ್ರಕರಣ 4ರ ಉಪಪ್ರಕರಣ (4)ರ (ಸಿ) ಖಂಡದ ಮೇರೆಗೆ ಯಾವುದೇ ವರ್ಗದ ಅಥವಾ ವರ್ಗಗಳ ಅರ್ಜಿಗಳ ಮತ್ತು ಅಪೀಲುಗಳ ಸಂಬಂಧದಲ್ಲಿ ಅರ್ಜಿಗಳನ್ನು ಮತ್ತು ಅಪೀಲುಗಳನ್ನು ಯಾವ ಸದಸ್ಯರು ವಿಚಾರಣೆ ಮಾಡಬೇಕೋ ಆ ಸದಸ್ಯರ ಕನಿಷ್ಠ ಸಂಖ್ಯೆ;

(ಡಿ) ಅಧ್ಯಕ್ಷನು, ಒಂದು ಉಪವೇಶನದ ಸ್ಥಳದಿಂದ (ಸಾಮಾನ್ಯವಾಗಿ ಉಪವೇಶನ ನಡೆಯುವ ಸ್ಥಳವೂ ಸೇರಿದಂತೆ), ಮತ್ತೊಂದು ಉಪವೇಶನದ ಸ್ಥಳಕ್ಕೆ ಪ್ರಕರಣಗಳನ್ನು ವರ್ಗಾವಣೆ ಮಾಡುವುದು;

(ಇ) ಆಯ್ಕೆ ಸಮಿತಿ ಮತ್ತು ಪ್ರಕರಣ 6ರ ಉಪಪ್ರಕರಣ (3)ರ ಮೇರೆಗೆ ನ್ಯಾಯಾಧಿಕರಣದ ನ್ಯಾಯಿಕ ಸದಸ್ಯನನ್ನು ಮತ್ತು ತಜ್ಞ ಸದಸ್ಯನನ್ನು ನೇಮಕ ಮಾಡುವ ರೀತಿ;

(ಎಫ್) ಪ್ರಕರಣ 9ರ ಮೇರೆಗೆ ನ್ಯಾಯಾಧಿಕರಣದ ಅಧ್ಯಕ್ಷನಿಗೆ, ನ್ಯಾಯಿಕ ಸದಸ್ಯನಿಗೆ ಮತ್ತು ತಜ್ಞ ಸದಸ್ಯನಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಮತ್ತು ಅವರ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು (ನಿವೃತ್ತಿವೇತನ, ಗ್ರ್ಯಾಚುಯಿಟಿ ಮತ್ತು ಇತರ ನಿವೃತ್ತಿ ಪ್ರಯೋಜನಗಳು ಸೇರಿದಂತೆ);

(ಜಿ) ಪ್ರಕರಣ 10ರ ಉಪಪ್ರಕರಣ (4)ರ ಮೇರೆಗೆ ನ್ಯಾಯಾಧಿಕರಣದ ಅಧ್ಯಕ್ಷನ ಅಥವಾ ನ್ಯಾಯಿಕ ಸದಸ್ಯನ ವಿರುದ್ಧ ಮಾಡಿರುವ ದೋಷಾರೋಪಗಳ ವಿಚಾರಣೆಗೆ ಕಾರ್ಯವಿಧಾನ;

(ಹೆಚ್) ಪ್ರಕರಣ 12ರ ಉಪಪ್ರಕರಣ (2)ರ ಮೇರೆಗೆ ನ್ಯಾಯಾಧಿಕರಣದ ಅಧಿಕಾರಿಗಳ ಮತ್ತು ಇತರ ನೌಕರರ ನೇಮಕಾತಿ; ಮತ್ತು ಅದೇ ಪ್ರಕರಣದ ಉಪಪ್ರಕರಣ (4)ರ ಮೇರೆಗೆ ನ್ಯಾಯಾಧಿಕರಣದ ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳ ಮತ್ತು ಭತ್ಯೆಗಳು ಹಾಗೂ ಸೇವೆಯ ಇತರ ಷರತ್ತುಗಳು;

(ಐ) ಪ್ರಕರಣ 13ರ ಮೇರೆಗೆ ನ್ಯಾಯಾಧಿಕರಣದ ಅಧ್ಯಕ್ಷನು ಚಲಾಯಿಸುವಂಥ ಹಣಕಾಸು ಮತ್ತು ಆಡಳಿತ ಅಧಿಕಾರಗಳು;

(ಜೆ) ಪ್ರಕರಣ 18ರ ಉಪಪ್ರಕರಣ (1)ರ ಮೇರೆಗೆ ಸಲ್ಲಿಸಬೇಕಾದ ಅರ್ಜಿಯ ಅಥವಾ ಅಪೀಲಿನ, ನಮೂನೆ, ಅದು ಯಾವ ವಿವರಗಳನ್ನು ಒಳಗೊಂಡಿರಬೇಕೋ ಆ ವಿವರಗಳು ಮತ್ತು ಅದರೊಂದಿಗೆ ಇರಬೇಕಾದ ದಸ್ತಾವೇಜುಗಳು ಮತ್ತು ಸಂದಾಯ ಮಾಡಬೇಕಾದ ಫೀಜು;

(ಕೆ) ಪ್ರಕರಣ 19ರ ಉಪಪ್ರಕರಣ (4)ರ (ಕೆ) ಖಂಡದ ಮೇರೆಗೆ ಯಾವ ವಿಷಯದ ಸಂಬಂಧದಲ್ಲಿ ನ್ಯಾಯಾಧಿಕರಣವು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರತಕ್ಕದ್ದೋ ಅಂಥ ಯಾವುದೇ ವಿಷಯ;

(ಎಲ್) ಪರಿಸರ ಪರಿಹಾರ ನಿಧಿಗೆ ಜಮೆ ಮಾಡಿದ ನಷ್ಟಪರಿಹಾರದ ಮೊತ್ತವನ್ನು ಅಥವಾ ಪರಿಹಾರದ ಮೊತ್ತವನ್ನು ಪ್ರಕರಣ 24ರ ಉಪಪ್ರಕರಣ (2)ರ ಮೇರೆಗೆ ಯಾವ ರೀತಿಯಲ್ಲಿ ಮತ್ತು ಯಾವ ಉದ್ದೇಶಗಳಿಗೆ ಬಳಸಿಕೊಳ್ಳಬೇಕೋ ಆ ರೀತಿ ಮತ್ತು ಆ ಉದ್ದೇಶಗಳು;

(ಎಂ) ಪ್ರಕರಣ 30ರ ಉಪಪ್ರಕರಣ (1)ರ (ಬಿ) ಖಂಡದ ಮೇರೆಗೆ ದೂರು ನೀಡುವುದಕ್ಕಾಗಿ ನೋಟೀಸನ್ನು ನೀಡುವ ವಿಧಾನ;

(ಎನ್) ಯಾವ ವಿಷಯವನ್ನು ನಿಯಮಗಳ ಮೂಲಕ ನಿರ್ದಿಷ್ಟಪಡಿಸಬೇಕಾದ ಅಗತ್ಯವಿದೆಯೋ ಅಥವಾ ನಿರ್ದಿಷ್ಟಪಡಿಸಬಹುದೋ ಅಥವಾ ಯಾವ ವಿಷಯದ ಸಂಬಂಧದಲ್ಲಿ ಈ ನಿಯಮಗಳ ಮೂಲಕ ಉಪಬಂಧ ಕಲ್ಪಿಸಬೇಕಾಗಿದೆಯೋ ಆ ಯಾವುದೇ ಇತರ ವಿಷಯ.

(3) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಗಿಯುವುದಕ್ಕೆ

ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಲು ಉಭಯ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡತಕ್ಕದ್ದಲ್ಲ ಎಂದು ಉಭಯ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಈ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**36. ಕೆಲವು ಅಧಿನಿಯಮಗಳಿಗೆ ತಿದ್ದುಪಡಿ ಮಾಡುವುದು.–** ಈ ಅಧಿನಿಯಮದ IIIನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಅಧಿನಿಯಮಿತಿಗಳನ್ನು, ಅದರಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ತಿದ್ದುಪಡಿ ಮಾಡತಕ್ಕದ್ದು ಮತ್ತು ಆ ತಿದ್ದುಪಡಿಗಳು ನ್ಯಾಯಾಧಿಕರಣವನ್ನು ಸ್ಥಾಪಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**37. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಾಗ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ತೊಂದರೆಯನ್ನು ನಿವಾರಿಸಲು ಅಗತ್ಯವೆಂದು ತನಗೆ ತೋರುವಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಕಲ್ಪಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾಗಬಹುದಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**38. ನಿರಸನ ಮತ್ತು ಉಳಿಸುವಿಕೆಗಳು.–** (1) ರಾಷ್ಟ್ರೀಯ ಪರಿಸರ ನ್ಯಾಯಾಧಿಕರಣ ಅಧಿನಿಯಮ, 1995 (1995ರ 27)ನ್ನು ಮತ್ತು ರಾಷ್ಟ್ರೀಯ ಪರಿಸರ ಅಪೀಲು ಪ್ರಾಧಿಕಾರ ಅಧಿನಿಯಮ, 1997 (1997ರ 22)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ. (ಇದರಲ್ಲಿ ಇನ್ನು ಮುಂದೆ ನಿರಸಿತ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ).

(2) ಹಾಗೆ ನಿರಸನಗೊಂಡಿದ್ದರೂ, ಸದರಿ ಅಧಿನಿಯಮಗಳ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಿಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

(3) ರಾಷ್ಟ್ರೀಯ ಪರಿಸರ ಅಪೀಲು ಪ್ರಾಧಿಕಾರ ಅಧಿನಿಯಮ, 1997 (1997ರ 22)ರ ಪ್ರಕರಣ 3ರ ಉಪಪ್ರಕರಣ (1)ರ ಮೇರೆಗೆ ಸ್ಥಾಪಿಸಿದ ರಾಷ್ಟ್ರೀಯ ಪರಿಸರ ಅಪೀಲು ಪ್ರಾಧಿಕಾರವನ್ನು ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಮೇರೆಗೆ, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವನ್ನು ಸ್ಥಾಪಿಸಿದ ಮೇಲೆ ವಿಸರ್ಜಿತವಾಗಿರತಕ್ಕದ್ದು.

(4) ರಾಷ್ಟ್ರೀಯ ಪರಿಸರ ಅಪೀಲು ಪ್ರಾಧಿಕಾರ ಅಧಿನಿಯಮ, 1997 (1997ರ 22)ರ ಪ್ರಕರಣ 3ರ ಉಪಪ್ರಕರಣ (1)ರ ಮೇರೆಗೆ ಸ್ಥಾಪಿಸಿದ ರಾಷ್ಟ್ರೀಯ ಪರಿಸರ ಅಪೀಲು ಪ್ರಾಧಿಕಾರವನ್ನು ವಿಸರ್ಜಿಸಿದ ತರುವಾಯ, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಮೇರೆಗೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವನ್ನು ಸ್ಥಾಪಿಸುವ ನಿಕಟಪೂರ್ವದಲ್ಲಿ ಸದರಿ ರಾಷ್ಟ್ರೀಯ ಪರಿಸರ ಅಪೀಲು ಪ್ರಾಧಿಕಾರದ ಅಧ್ಯಕ್ಷನಾಗಿ, ಉಪಾಧ್ಯಕ್ಷನಾಗಿ ನೇಮಕಗೊಂಡ ಮತ್ತು ಸದಸ್ಯನಾಗಿ

ನೇಮಕಗೊಂಡ ಪ್ರತಿಯೊಬ್ಬ ಇತರೆ ವ್ಯಕ್ತಿಯು ಮತ್ತು ಅಧ್ಯಕ್ಷನಾಗಿ, ಉಪಾಧ್ಯಕ್ಷನಾಗಿ ಪದವನ್ನು ಧಾರಣ ಮಾಡಿರುವ ವ್ಯಕ್ತಿಗಳು ಮತ್ತು ಸದಸ್ಯನಾಗಿ ನೇಮಕಗೊಂಡ ಹಾಗೂ ಸದಸ್ಯನಾಗಿ ಪದವನ್ನು ಧಾರಣ ಮಾಡಿದ ಪ್ರತಿಯೊಬ್ಬ ಇತರ ವ್ಯಕ್ತಿಯು, ತಮ್ಮ ತಮ್ಮ ಪದಗಳನ್ನು ತೆರವುಗೊಳಿಸತಕ್ಕದ್ದು ಹಾಗೂ ತಮ್ಮ ಪದವನ್ನು ಅಥವಾ ಸೇವೆಯ ಯಾವುದೇ ಕರಾರನ್ನು ಅವಧಿಪೂರ್ಣಗೊಳ್ಳುವುದಕ್ಕೆ ಮೊದಲೇ ಕೊನೆಗೊಳಿಸಿದ್ದಕ್ಕಾಗಿ ಯಾವುದೇ ನಷ್ಟಪರಿಹಾರವನ್ನು ಕ್ಲೇಮು ಮಾಡಲು ಅಂಥ ಯಾರೇ ಅಧ್ಯಕ್ಷನು, ಉಪಾಧ್ಯಕ್ಷನು ಮತ್ತು ಸದಸ್ಯನಾಗಿ ನೇಮಕಗೊಂಡ ಇತರ ಪ್ರತಿಯೊಬ್ಬ ವ್ಯಕ್ತಿಯು ಹಕ್ಕುಳ್ಳವರಾಗಿರತಕ್ಕದ್ದಲ್ಲ.

(5) ರಾಷ್ಟ್ರೀಯ ಪರಿಸರ ಅಪೀಲು ಪ್ರಾಧಿಕಾರ ಅಧಿನಿಯಮ, 1997 (1997ರ 22)ರ ಪ್ರಕರಣ 3ರ ಉಪಪ್ರಕರಣ (1)ರ ಮೇರೆಗೆ ಸ್ಥಾಪಿಸಿದ ರಾಷ್ಟ್ರೀಯ ಪರಿಸರ ಅಪೀಲು ಪ್ರಾಧಿಕಾರದ ಮುಂದೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಮೇರೆಗೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವನ್ನು ಸ್ಥಾಪಿಸಿದಂದು ಅಥವಾ ಅದಕ್ಕೆ ಮೊದಲು ಬಾಕಿಯಿದ್ದ ಎಲ್ಲಾ ಪ್ರಕರಣಗಳು ಸದರಿ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವನ್ನು ಸ್ಥಾಪಿಸಿದ ಮೇಲೆ ಆ ನ್ಯಾಯಾಧಿಕರಣಕ್ಕೆ ವರ್ಗಾವಣೆಯಾಗತಕ್ಕದ್ದು ಮತ್ತು ಆ ಪ್ರಕರಣಗಳು ಆ ಅಧಿನಿಯಮದ ಮೇರೆಗೆ ದಾಖಲಿಸಿದ್ದ ಪ್ರಕರಣಗಳಾಗಿದ್ದರೆ ಅವುಗಳನ್ನು ಹೇಗೆ ವಿಲೆ ಮಾಡಲಾಗುತ್ತಿತ್ತೋ ಅದೇ ರೀತಿಯಲ್ಲಿ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವು ಅವುಗಳನ್ನು ವಿಲೆ ಮಾಡತಕ್ಕದ್ದು.

(6) ರಾಷ್ಟ್ರೀಯ ಪರಿಸರ ಅಪೀಲು ಪ್ರಾಧಿಕಾರವನ್ನು ವಿಸರ್ಜಿಸುವುದಕ್ಕೆ ನಿಕಟಪೂರ್ವದಲ್ಲಿ ಯಾವ ಅಧಿಕಾರಿಗಳನ್ನು ಅಥವಾ ಇತರೆ ನೌಕರರನ್ನು ಪ್ರತಿನಿಯೋಜನೆ ಮೇರೆಗೆ ರಾಷ್ಟ್ರೀಯ ಪರಿಸರ ಅಪೀಲು ಪ್ರಾಧಿಕಾರಕ್ಕೆ ನೇಮಕ ಮಾಡಲಾಗಿತ್ತೋ ಆ ಅಧಿಕಾರಿಗಳನ್ನು ಅಥವಾ ಇತರ ನೌಕರರನ್ನು, ಪ್ರಾಧಿಕಾರವನ್ನು ವಿಸರ್ಜಿಸಿದ ನಂತರ ಸಂದರ್ಭಾನುಸಾರ ಅವರ ಮೂಲ ಕೇಡರ್‌ಗೆ, ಮಂತ್ರಾಲಯಕ್ಕೆ ಅಥವಾ ಇಲಾಖೆಗೆ ಹಿಂದಕ್ಕೆ ಕಳುಹಿಸತಕ್ಕದ್ದು.

(7) ರಾಷ್ಟ್ರೀಯ ಪರಿಸರ ಅಪೀಲು ಪ್ರಾಧಿಕಾರವನ್ನು ವಿಸರ್ಜಿಸುವುದಕ್ಕೆ ನಿಕಟಪೂರ್ವದಲ್ಲಿ ಯಾವ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ರಾಷ್ಟ್ರೀಯ ಪರಿಸರ, ಅಪೀಲು ಪ್ರಾಧಿಕಾರದ ಅಧೀನದಲ್ಲಿ ಕರಾರು ಆಧಾರದ ಮೇಲೆ ನೇಮಕ ಮಾಡಲಾಗಿತ್ತೋ ಮತ್ತು ಅಧಿಕಾರಿಗಳಾಗಿ ಮತ್ತು ಇತರ ನೌಕರರಾಗಿ ಅವರು ಯಾವ ಹುದ್ದೆಯನ್ನು ಧಾರಣ ಮಾಡಿದ್ದರೋ ಅಂಥ ಅಧಿಕಾರಿಗಳು ಮತ್ತು ಇತರ ನೌಕರರು ರಾಷ್ಟ್ರೀಯ ಪರಿಸರ ಅಪೀಲು ಪ್ರಾಧಿಕಾರವನ್ನು ವಿಸರ್ಜಿಸಿದ ನಂತರ ತಮ್ಮ ತಮ್ಮ ಹುದ್ದೆಗಳನ್ನು ತೆರವುಗೊಳಿಸತಕ್ಕದ್ದು ಮತ್ತು ತಮ್ಮ ಸೇವೆಯ ಕರಾರಿನ ಮೇರೆಗೆ ತಮ್ಮ ಹುದ್ದೆಯನ್ನು ಅವಧಿ ಪೂರ್ಣಗೊಳ್ಳುವ ಮೊದಲೇ ಕೊನೆಗೊಳಿಸಿದ್ದಕ್ಕಾಗಿ ಮೂರು ತಿಂಗಳ ವೇತನ ಮತ್ತು ಭತ್ಯೆಗಳು ಅಥವಾ ಸೇವೆಯ ಉಳಿದ ಅವಧಿಗೆ ವೇತನ ಮತ್ತು ಭತ್ಯೆಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅದಕ್ಕೆ ನಷ್ಟಪರಿಹಾರವನ್ನು ಕ್ಲೇಮು ಮಾಡಲು ಅಂಥ ಅಧಿಕಾರಿಗಳು ಮತ್ತು ಇತರ ನೌಕರರು ಹಕ್ಕುಳ್ಳವರಾಗಿರತಕ್ಕದ್ದು.

(8) ಉಪಪ್ರಕರಣ (2) ರಿಂದ (7) ವರೆಗಿನ ಉಪಪ್ರಕರಣಗಳಲ್ಲಿ ಉಲ್ಲೇಖಿಸಿದ ನಿರ್ದಿಷ್ಟ ವಿಷಯಗಳನ್ನು ಪ್ರಸ್ತಾಪಿಸಿರುವುದು ನಿರಸನದ ಪರಿಣಾಮಕ್ಕೆ ಸಂಬಂಧಿಸಿದಂತೆ ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ ಪ್ರಕರಣ 6ರ ಸಾಮಾನ್ಯ ಅನ್ವಯಕ್ಕೆ ಬಾಧಕವಾಗುತ್ತದೆಂದು ಅಥವಾ ಅದರ ಮೇಲೆ ಪರಿಣಾಮ ಉಂಟು ಮಾಡುತ್ತದೆಂದು ಭಾವಿಸತಕ್ಕದ್ದಲ್ಲ.

## ಅನುಸೂಚಿ I

**[14(1), 15(1), 17(1)(ಎ), 17(2), 19(4)(ಜೆ) ಮತ್ತು 34(1)ನೇ ಪ್ರಕರಣಗಳನ್ನು ನೋಡಿ]**

1. ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974;

2. ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಉಪಕರ ಅಧಿನಿಯಮ, 1977;

3. ಅರಣ್ಯ (ಸಂರಕ್ಷಣಾ) ಅಧಿನಿಯಮ, 1980;

4. ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981;

5. ಪರಿಸರ (ಸಂರಕ್ಷಣಾ) ಅಧಿನಿಯಮ, 1986;

6. ಸಾರ್ವಜನಿಕ ಹೊಣೆಗಾರಿಕೆ ವಿಮಾ ಅಧಿನಿಯಮ, 1991;

7. ಜೈವಿಕ ವೈವಿಧ್ಯತೆ ಅಧಿನಿಯಮ, 2002;

## ಅನುಸೂಚಿ II

**[ಪ್ರಕರಣ 15(4) ಮತ್ತು 17(1)ನ್ನು ನೋಡಿ]**

ಹಾನಿಗಾಗಿ ನಷ್ಟಪರಿಹಾರವನ್ನು ಅಥವಾ ಪರಿಹಾರವನ್ನು ಯಾವ ಶೀರ್ಷಿಕೆಗಳ ಅಡಿಯಲ್ಲಿ ಕ್ಲೇಮು ಮಾಡಬಹುದೋ ಆ ಶೀರ್ಷಿಕೆಗಳು

(ಎ) ಮರಣ;

(ಬಿ) ಖಾಯಂ, ತಾತ್ಕಾಲಿಕ, ಪೂರ್ಣ ಅಥವಾ ಭಾಗಶಃ ಅಶಕ್ತತೆ ಅಥವಾ ಇತರ ಕ್ಷತಿ ಅಥವಾ ವ್ಯಾಧಿಗ್ರಸ್ಥತೆ;

(ಸಿ) ಪೂರ್ಣ ಅಥವಾ ಭಾಗಶಃ ಅಶಕ್ತತೆಯಿಂದಾಗಿ ಅಥವಾ ಖಾಯಂ ಅಥವಾ ತಾತ್ಕಾಲಿಕ ಅಶಕ್ತತೆಯಿಂದಾಗಿ ಮಜೂರಿಗಳ ನಷ್ಟ;

(ಡಿ) ಕ್ಷತಿಗಳಿಗೆ ಅಥವಾ ವ್ಯಾಧಿಗ್ರಸ್ಥತೆಗೆ ಚಿಕಿತ್ಸೆ ಪಡೆಯಲು ಮಾಡಿದ ವೈದ್ಯಕೀಯ ವೆಚ್ಚಗಳು;

(ಇ) ಖಾಸಗಿ ಸ್ವತ್ತಿಗೆ ಹಾನಿಗಳು;

(ಎಫ್) ಬಾಧಿತ ವ್ಯಕ್ತಿಗಳಿಗೆ ಪರಿಹಾರವನ್ನು, ನೆರವನ್ನು ನೀಡುವಾಗ ಮತ್ತು ಪುನರ್ವಸತಿ ಕಲ್ಪಿಸುವಾಗ ಸರ್ಕಾರವು ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರವು ಮಾಡಿದ ವೆಚ್ಚಗಳು;

(ಜಿ) ಪರಿಸರ ಅವನತಿಗಾಗಿ ಪರಿಹಾರ ಮತ್ತು ಪರಿಸರದ ಗುಣಮಟ್ಟವನ್ನು ಪೂರ್ವ ಸ್ಥಿತಿಗೆ ತರುವುದೂ ಸೇರಿದಂತೆ ಯಾವುದೇ ಆಡಳಿತ ಅಥವಾ ಕಾನೂನು ಕ್ರಮಕ್ಕಾಗಿ ಅಥವಾ ಯಾವುದೇ ತೊಂದರೆ ಅಥವಾ ಹಾನಿಯ ನಿಮಿತ್ತ ಹಣವನ್ನು ತುಂಬಿಕೊಡುವುದಕ್ಕಾಗಿ ಸರ್ಕಾರವು ಮಾಡಿದ ವೆಚ್ಚಗಳು;

(ಹೆಚ್) ಯಾವುದೇ ಹಾನಿಯನ್ನುಂಟು ಮಾಡುವ ಚಟುವಟಿಕೆಯಿಂದಾಗಿ ಅಥವಾ ಅದರ ಸಂಬಂಧದಲ್ಲಿ ಸರ್ಕಾರಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಆದ ನಷ್ಟ;

(ಐ) ಹೈನುರಾಸು ಮತ್ತು ಭಾರ ಎಳೆಯುವ ಪ್ರಾಣಿಗಳು ಹಾಗೂ ಜಲಚರ ಪ್ರಾಣಿಗಳು ಸೇರಿದಂತೆ ಪ್ರಾಣಿ ಸಂಕುಲಕ್ಕೆ ಆದ ಯಾವುದೇ ತೊಂದರೆಯ, ಹಾನಿಯ ಅಥವಾ ಅವುಗಳ ವಿನಾಶದ ಕಾರಣದಿಂದಾಗಿ ಉದ್ಭವಿಸುವ ಕ್ಲೇಮುಗಳು;

(ಜೆ) ಜಲ ಸಸ್ಯ ಸಂಪತ್ತು, ಬೆಳೆಗಳು, ತರಕಾರಿ ಬೆಳೆಗಳು, ಮರಗಳು ಮತ್ತು ಹಣ್ಣಿನ ತೋಟಗಳೂ ಸೇರಿದಂತೆ ಸಸ್ಯ ಸಂಪತ್ತಿಗೆ ಆದ ಯಾವುದೇ ತೊಂದರೆಯ, ಹಾನಿಯ ಅಥವಾ ಅದರ ವಿನಾಶದ ಕಾರಣದಿಂದಾಗಿ ಉದ್ಭವಿಸುವ ಕ್ಲೇಮುಗಳು;

(ಕೆ) ಮಣ್ಣಿನ, ಗಾಳಿಯ, ನೀರಿನ, ಭೂಮಿಯ ಮತ್ತು ಜೀವಿ ಪರಿಸರ ವ್ಯವಸ್ಥೆಗಳ ಮಾಲಿನ್ಯವು ಸೇರಿದಂತೆ ಪರಿಸರಕ್ಕೆ ಆಗುವ ಯಾವುದೇ ತೊಂದರೆ ಅಥವಾ ಹಾನಿಯ ಕಾರಣದಿಂದಾಗಿ ಅವುಗಳನ್ನು ಪೂರ್ವಸ್ಥಿತಿಗೆ ತರುವುದಕ್ಕೆ ಮಾಡುವ ವೆಚ್ಚಗಳೂ ಸೇರಿದಂತೆ ಕ್ಲೇಮುಗಳು;

(ಎಲ್) ಖಾಸಗಿ ಸ್ವತ್ತನ್ನು ಹೊರತುಪಡಿಸಿ ಯಾವುದೇ ಸ್ವತ್ತಿನ ನಷ್ಟ ಮತ್ತು ವಿನಾಶ;

(ಎಂ) ವ್ಯವಹಾರದ ಅಥವಾ ಉದ್ಯೋಗದ ಅಥವಾ ಅವೆರಡರ ನಷ್ಟ;

(ಎನ್) ಅಪಾಯಕಾರಿ ವಸ್ತುವಿನ ನಿರ್ವಹಣೆಯ ಯಾವುದೇ ಕಾರ್ಯಚಟುವಟಿಕೆಯಿಂದ ಉದ್ಭವಿಸಿದ ಅಥವಾ ಅದರ ಸಂಬಂಧದಲ್ಲಿ ಉದ್ಭವಿಸುವ ಯಾವುದೇ ಇತರ ಕ್ಲೇಮು.

**ಅನುಸೂಚಿ III**

**(ಪ್ರಕರಣ 36ನ್ನು ನೋಡಿ)**

**ಕೆಲವು ಅಧಿನಿಯಮಗಳಿಗೆ ತಿದ್ದುಪಡಿ**

**ಭಾಗ I**

**ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974 (1974ರ 6) ಕ್ಕೆ ತಿದ್ದುಪಡಿ**

**ಹೊಸ ಪ್ರಕರಣ 33ಬಿ ನ ಸೇರ್ಪಡೆ.–** ಪ್ರಕರಣ 33ಎ ನ ತರುವಾಯ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"**33ಬಿ. ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಅಪೀಲು.–** ಯಾರೇ ವ್ಯಕ್ತಿಯು,–

(ಎ) ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ಆ ತರುವಾಯ ಅಪೀಲು ಪ್ರಾಧಿಕಾರವು ಪ್ರಕರಣ 28ರ ಮೇರೆಗೆ ಮಾಡಿದ ಆದೇಶದಿಂದ ಅಥವಾ ನೀಡಿದ ತೀರ್ಮಾನದಿಂದ; ಅಥವಾ

(ಬಿ) ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ಆ ತರುವಾಯ ರಾಜ್ಯ ಸರ್ಕಾರವು ಪ್ರಕರಣ 29ರ ಮೇರೆಗೆ ಹೊರಡಿಸಿದ ಆದೇಶದಿಂದ; ಅಥವಾ

(ಸಿ) ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ಆ ತರುವಾಯ, ಪ್ರಕರಣ 33ಎ ನ ಮೇರೆಗೆ ಮಂಡಳಿಯು ನೀಡಿದ ನಿರ್ದೇಶನಗಳಿಂದ

– ಬಾಧಿತನಾದರೆ ಅವನು ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಕರಣ 3ರ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಆ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಅಪೀಲನ್ನು ಸಲ್ಲಿಸಬಹುದು".

**ಭಾಗ II**

**ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಉಪಕರ ಅಧಿನಿಯಮ, 1977 (1977 ರ 36)ಕ್ಕೆ ತಿದ್ದುಪಡಿಗಳು**

**1. ಪ್ರಕರಣ 13ರ ತಿದ್ದುಪಡಿ.–** ಪ್ರಕರಣ 13ರ ಉಪಪ್ರಕರಣ (4)ರಲ್ಲಿ ಬರುವ "ಅಂತಿಮವಾದುದಾಗಿರತಕ್ಕದ್ದು" ಎಂಬ ಪದಗಳಿಗೆ ಬದಲಾಗಿ, "ಪ್ರಕರಣ 13ಎ ನ ಮೇರೆಗೆ ಯಾವುದೇ ಅಪೀಲನ್ನು ಸಲ್ಲಿಸದಿದ್ದರೆ ಅಂತಿಮವಾದುದಾಗಿರತಕ್ಕದ್ದು" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**2. ಹೊಸ ಪ್ರಕರಣ 13ಎ ನ ಸೇರ್ಪಡೆ.–** ಪ್ರಕರಣ 13ರ ತರುವಾಯ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"**13ಎ. ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಅಪೀಲು.–** ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ತರುವಾಯ, ಅಪೀಲು ಪ್ರಾಧಿಕಾರವು, ಪ್ರಕರಣ 13ರ ಮೇರೆಗೆ ಮಾಡಿದ ಆದೇಶದಿಂದ ಅಥವಾ ನೀಡಿದ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಕರಣ 3ರ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಆ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಅಪೀಲನ್ನು ಸಲ್ಲಿಸಬಹುದು."

**ಭಾಗ III**

**ಅರಣ್ಯ (ಸಂರಕ್ಷಣೆ) ಅಧಿನಿಯಮ, 1980 (1980ರ 69)ಕ್ಕೆ ತಿದ್ದುಪಡಿ**

**ಹೊಸ ಪ್ರಕರಣ 2ಎ ನ ಸೇರ್ಪಡೆ.–** ಪ್ರಕರಣ 2ರ ತರುವಾಯ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"**2ಎ. ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಅಪೀಲು.–** "ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ತರುವಾಯ, ರಾಜ್ಯ ಸರ್ಕಾರವು ಅಥವಾ ಇತರ ಪ್ರಾಧಿಕಾರವು ಪ್ರಕರಣ 2ರ ಮೇರೆಗೆ ಮಾಡಿದ ಆದೇಶದಿಂದ ಅಥವಾ ನೀಡಿದ ತೀರ್ಮಾನದಿಂದ, ಬಾಧಿತನಾದ ಯಾರೇ ವ್ಯಕ್ತಿಯು, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಕರಣ 3ರ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಆ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಅಪೀಲನ್ನು ಸಲ್ಲಿಸಬಹುದು."

## ಭಾಗ IV

## ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (1981ರ 14)ಕ್ಕೆ ತಿದ್ದುಪಡಿ

**ಹೊಸ ಪ್ರಕರಣ 31ಬಿ ಯ ಸೇರ್ಪಡೆ.–** ಪ್ರಕರಣ 31ಎ ನ ತರುವಾಯ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು ಎಂದರೆ:–

"**31ಬಿ. ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಅಪೀಲು.–** ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ತರುವಾಯ, ಪ್ರಕರಣ 31ರ ಮೇರೆಗೆ ಮಾಡಿದ, ಅಪೀಲು ಪ್ರಾಧಿಕಾರವು ಮಾಡಿದ ಆದೇಶದಿಂದ ಅಥವಾ ನೀಡಿದ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಕರಣ 3ರ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಆ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಅಪೀಲನ್ನು ಸಲ್ಲಿಸಬಹುದು."

## ಭಾಗ V

## ಪರಿಸರ (ಸಂರಕ್ಷಣೆ) ಅಧಿನಿಯಮ, 1986 (1986ರ 29)ಕ್ಕೆ ತಿದ್ದುಪಡಿ

**ಹೊಸ ಪ್ರಕರಣ 5ಎ ನ ಸೇರ್ಪಡೆ.–** ಪ್ರಕರಣ 5ರ ತರುವಾಯ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"**5ಎ. ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಅಪೀಲು.–** ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ಆ ತರುವಾಯ ಪ್ರಕರಣ 5ರ ಮೇರೆಗೆ ನೀಡಿದ ಯಾವುದೇ ನಿರ್ದೇಶನಗಳಿಂದ ಬಾಧಿತನಾದ ಯಾರೇ ವ್ಯಕ್ತಿಯು, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಕರಣ 3ರ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಆ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಅಪೀಲನ್ನು ಸಲ್ಲಿಸಬಹುದು".

## ಭಾಗ VI

## ಜೈವಿಕ ವೈವಿಧ್ಯತೆ ಅಧಿನಿಯಮ, 2002 (2003ರ 18)ಕ್ಕೆ ತಿದ್ದುಪಡಿಗಳು

**1. ಪ್ರಕರಣ 52ರ ತಿದ್ದುಪಡಿ.–** ಪ್ರಕರಣ 52ರಲ್ಲಿ ಪರಂತುಕದ ತರುವಾಯ, ಈ ಮುಂದಿನ ಪರಂತುಕಗಳನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತು ಪರಂತು, ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಮತ್ತು ಪ್ರಾರಂಭದಿಂದ ಅನ್ವಯವಾಗತಕ್ಕದ್ದಲ್ಲ:

ಮತ್ತು ಪರಂತು, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭಕ್ಕೆ ಮೊದಲು ಉಚ್ಚ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಅಪೀಲನ್ನು, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಕರಣ 3ರ ಮೇರೆಗೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವು ಸ್ಥಾಪಿತವಾಗಿರದಿದ್ದರೆ ಹೇಗೆ

ವಿಚಾರಣೆ ಮಾಡಲಾಗುತ್ತಿತ್ತೋ ಮತ್ತು ವಿಲೆ ಮಾಡಲಾಗುತ್ತಿತ್ತೋ ಅದೇ ರೀತಿಯಲ್ಲಿ ಉಚ್ಚ ನ್ಯಾಯಾಲಯವು ಅದರ ವಿಚಾರಣೆಯನ್ನು ಮುಂದುವರೆಸತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು".

**2. ಹೊಸ ಪ್ರಕರಣ 52ಎ ನ ಸೇರ್ಪಡೆ.–** ಪ್ರಕರಣ 52ರ ತರುವಾಯ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"**52ಎ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಅಪೀಲು.–** ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ಆ ತರುವಾಯ, ಈ ಅಧಿನಿಯಮದ ಮೇರೆಗೆ ರಾಷ್ಟ್ರೀಯ ಜೈವಿಕ ವೈವಿಧ್ಯತೆ ಪ್ರಾಧಿಕಾರವು ಅಥವಾ ರಾಜ್ಯ ಜೈವಿಕ ವೈವಿಧ್ಯತೆ ಮಂಡಳಿಯು ಮಾಡಿದ ಪ್ರಯೋಜನ ಹಂಚಿಕೆಯ ಯಾವುದೇ ನಿರ್ಧರಣೆಯಿಂದ ಅಥವಾ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಕರಣ 3ರ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಆ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಅಪೀಲನ್ನು ಸಲ್ಲಿಸಬಹುದು".